ಕರ್ನಾಟಕ ಸರ್ಕಾರ

# ಕರ್ನಾಟಕ ಜೀವವೈವಿಧ್ಯ ಮಂಡಳಿ
## (ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)

# ವಾರ್ಷಿಕ ವರದಿ 2021-2022



**ನೆಲಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003.**
**ದೂರವಾಣಿ ಸಂಖ್ಯೆ: 080-23448783/23448784**
**ಇ-ಮೇಲ್:** kbb-ka@nic.in, kbb.ka.ms@gmail.com **ಅಂತರ್ಜಾಲ:** kbb.karnataka.gov.in

# ವಾರ್ಷಿಕ ವರದಿ 2021-2022


| ಕ್ರಮ ಸಂ. | ವಿಷಯಗಳು | ಪುಟ ಸಂ |
|---|---|---|
| 1 | ಪೀಠಿಕೆ | 5 |
| 1.1 | ಜೈವಿಕವೈವಿಧ್ಯದ ಒಡಂಬಡಿಕೆ | 6 |
| 1.2 | ಜೀವವೈವಿಧ್ಯ ಅಧಿನಿಯಮ 2002 | 6 |
| 1.3 | ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ | 6 |
| 2 | ಕರ್ನಾಟಕ ಜೀವವೈವಿಧ್ಯ ಮಂಡಳಿ | 7 |
| 2.1 | ಕರ್ನಾಟಕ ಜೀವವೈವಿಧ್ಯ ಮಂಡಳಿಯ ರಚನೆ ಹಾಗೂ ಕಾರ್ಯಚಟುವಟಿಕೆಗಳು | 7 |
| 2.2 | ಮಂಡಳಿಯ ರಚನೆ | 8 |
| 2.3 | ಮಂಡಳಿಯ ಸಿಬ್ಬಂದಿಗಳ ವಿವರ | 9 |
| 3. | ಮಂಡಳಿಯ ಸಭೆಗಳು | 10 |
| 4 | 2021-22ನೇ ಸಾಲಿನಲ್ಲಿ ಮಂಡಳಿಯು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ವಿಡಿಯೋ ಕಾನ್‌ಫರೆನ್ಸ್‌ಗಳು ಹಾಗೂ ಕ್ಷೇತ್ರ ಭೇಟಿ | 10-14 |
| 4.1 | ಶ್ರೀ ಅನಂತ ಹೆಗಡೆ ಆಶೀಸರ, ಮಾನ್ಯ ಅಧ್ಯಕ್ಷರು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ವಿಡಿಯೋ ಕಾನ್‌ಫರೆನ್ಸ್‌ಗಳು ಹಾಗೂ ಕ್ಷೇತ್ರ ಭೇಟಿ | 14-21 |
| 5 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳು | 22 |
| 5.1 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಚಟುವಟಿಕೆಗಳು | 22 |
| 5.2 | ರಚನೆಗೊಂಡ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಪ್ರಗತಿಯ ವಿವರ | 22 |
| 6 | ಜನತಾ ಜೀವವೈವಿಧ್ಯ ದಾಖಲಾತಿ | 22 |
| 6.1 | ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಹಂತಗಳು | 23 |
| 6.2 | ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿಯ ವಿವರ | 23 |
| 7 | ಜೀವವೈವಿಧ್ಯ ತರಬೇತಿ ಕಾರ್ಯಕ್ರಮ | 23 |
| 7.1 | 2021-22ನೇ ಸಾಲಿನಲ್ಲಿ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮ | 24 |
| 7.2 | ವರ್ಷವಾರು ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಗಳ ವಿವರ | 24 |
| 8 | ಜೀವವೈವಿಧ್ಯ ಪಾರಂಪರಿಕ ತಾಣಗಳು | 25 |
| 8.1 | ಜೀವವೈವಿಧ್ಯ ಪಾರಂಪರಿಕ ತಾಣಗಳ ಘೋಷಣೆಗೆ ಗುರುತಿಸಲಾದ ಪ್ರದೇಶಗಳ ವಿವರ | 25 |
| 9 | ಸಂಶೋಧನಾ ಯೋಜನೆಗಳು/ಅಧ್ಯಯನಗಳು | 26 |
| 9.1 | 2021-22ನೇ ಸಾಲಿನಲ್ಲಿ ಮಂಜೂರಾದ ಸಂಶೋಧನಾ ಯೋಜನೆಗಳು/ ಅಧ್ಯಯನಗಳು | 26 |

| | | |
|---|---|---|
| 9.2 | ಪ್ರಗತಿಯಲ್ಲಿರುವ ಸಂಶೋಧನಾ ಯೋಜನೆಗಳು | 27 |
| 10 | ಬಳಕೆ ಮತ್ತು ಲಾಭ ಹಂಚಿಕೆಗಳ ಅನುಷ್ಠಾನ | 27 |
| 10.1 | ಕೇಂದ್ರ ಸರ್ಕಾರದ ಸಂಸತ್ತಿನಲ್ಲಿ ಜೈವಿಕವೈವಿಧ್ಯ ಕಾಯ್ದೆ 2002ರ ತಿದ್ದುಪಡಿ ಮಸೂದೆ | 28-29 |
| 10.2 | ಎಬಿಎಸ್ ಅನುದಾನವನ್ನು ಎಂಟು ಮಾದರಿ ತಾಲ್ಲೂಕು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಬಿಡುಗಡೆ | 30 |
| 11 | ಕಾನೂನು ಪ್ರಕರಣಗಳು | 30-32 |
| 12 | ವಿಶೇಷ ಕಾರ್ಯಕ್ರಮಗಳು | 32 |
| 12.1 | ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ | 32 |
| 12.2 | ಕರ್ನಾಟಕ ಗಿಡ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯ ಸಮ್ಮೇಳನ | 33 |
| 13 | ಪ್ರಕಟಣೆಗಳು | 34 |
| 14 | ಕರ್ನಾಟಕ ಜೀವವೈವಿಧ್ಯ ಮಂಡಳಿಯ ಹಣಕಾಸಿನ ವರ್ಷವಾದ 2021-22ನೇ ಸಾಲಿನ ಆಯವ್ಯಯ ಮತ್ತು ವೆಚ್ಚಗಳ ವರದಿ: | 35 |
| 15 | ಫೋಟೋ ಗ್ಯಾಲರಿ | 36-40 |






**ಪರಿವಿಡಿ**


| ಕ್ರ.ಸಂ | ವಿವರಣೆ | ಪುಟ ಸಂಖ್ಯೆ |
|---|---|---|
| 01 | ವಾರ್ಷಿಕ ವರದಿ – 2021-22 (ಕನ್ನಡ) | 1-40 |
| 02 | ವಾರ್ಷಿಕ ವರದಿ – 2021-22 (ಆಂಗ್ಲ) | 1-37 |

## 2. ಪೀಠಿಕೆ

"ಜೈವಿಕವೈವಿಧ್ಯತೆಯು ಭೂಮಿಯ, ಸಮುದ್ರ ಮತ್ತು ಮರುಭೂಮಿ ಪರಿಸರ ವ್ಯವಸ್ಥೆಗಳು ಮತ್ತು ಅವುಗಳ ಭಾಗವಾಗಿರುವ ಪರಿಸರ ಸಂಕೀರ್ಣಗಳು ಸೇರಿದಂತೆ ವಿವಿಧ ಮೂಲಗಳಿಂದ ಜೀವಿಗಳ ನಡುವಿನ ವ್ಯತ್ಯಾಸವಾಗಿದೆ"

ಜೀವವೈವಿಧ್ಯವು ಭೂಮಿಯ ಮೇಲಿನ ಜೀವನದ ಶ್ರೀಮಂತಿಕೆ ಮತ್ತು ವೈವಿಧ್ಯತೆಯನ್ನು ವಿವರಿಸುತ್ತದೆ. ಇದು ನಮ್ಮ ಗ್ರಹದ ಪ್ರಮುಖ ಲಕ್ಷಣವಾಗಿದೆ. ಜೀವವೈವಿಧ್ಯವಿಲ್ಲದೇ ಜೀವನ ಉಳಿಯುವುದಿಲ್ಲ.

ಜೀವವೈವಿಧ್ಯ ಎಂಬ ಪದವನ್ನು 1985ರಲ್ಲಿ ರಚಿಸಲಾಯಿತು. ಇದು ನೈಸರ್ಗಿಕ ಮತ್ತು ಕೃತಕ ಪರಿಸರ ವ್ಯವಸ್ಥೆಗಳಲ್ಲಿ ಮುಖ್ಯವಾಗಿದೆ. ಇದು ಪ್ರಕೃತಿಯ ವೈವಿಧ್ಯತೆ, ಜೀವಗಳೊಂದಿಗೆ ವ್ಯವಹರಿಸುತ್ತದೆ. ಇದು ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಜೀವಿಗಳ ಜಾತಿಗಳ ನಡುವಿನ ವ್ಯತ್ಯಾಸಗಳನ್ನು ಸೂಚಿಸುತ್ತದೆ.

ಜೀವವೈವಿಧ್ಯವು ಪರಿಸರ ವ್ಯವಸ್ಥೆಯಲ್ಲಿ ವಿವಿಧ ಜೀವಿಗಳ ಸಂಖ್ಯೆ ಮತ್ತು ಅವುಗಳ ಸಾಪೇಕ್ಷ ಆವರ್ತನಗಳನ್ನು ಒಳಗೊಂಡಿದೆ. ಇದು ವಿವಿಧ ಹಂತಗಳಲ್ಲಿ ಜೀವಿಗಳ ಸಂಘಟನೆಯನ್ನು ಪ್ರತಿಬಿಂಬಿಸುತ್ತದೆ.

ಜೀವವೈವಿಧ್ಯವು ಪರಿಸರ ಮತ್ತು ಆರ್ಥಿಕ ಮಹತ್ವವನ್ನು ಹೊಂದಿದೆ. ಇದು ನಮಗೆ ಪೋಷಣೆ, ವಸತಿ, ಇಂಧನ, ಬಟ್ಟೆ ಮತ್ತು ಹಲವಾರು ಇತರ ಸಂಪನ್ಮೂಲಗಳನ್ನು ಒದಗಿಸುತ್ತದೆ. ಇದು ಪ್ರವಾಸೋದ್ಯಮದ ಮೂಲಕ ವಿತ್ತೀಯ ಪ್ರಯೋಜನಗಳನ್ನು ಹೊರತೆಗೆಯುತ್ತದೆ. ಆದ್ದರಿಂದ, ಸುಸ್ಥಿರ ಜೀವನೋಪಯಕ್ಕಾಗಿ ಜೀವವೈವಿಧ್ಯತೆಯ ಉತ್ತಮ ಜ್ಞಾನವನ್ನು ಹೊಂದಿರುವುದು ಬಹಳ ಮುಖ್ಯ.

**ಮೂರು ವಿಭಿನ್ನ ರೀತಿಯ ಜೀವವೈವಿಧ್ಯಗಳು ಕೆಳಕಂಡಂತಿವೆ:**

1. ಅನುವಂಶಿಕ ಜೀವವೈವಿಧ್ಯ
2. ಪ್ರಬೇಧಗಳ ಜೀವವೈವಿಧ್ಯ
3. ಪರಿಸರ ಜೀವವೈವಿಧ್ಯ



## 2.1 ಜೈವಿಕವೈವಿಧ್ಯದ ಒಡಂಬಡಿಕೆ

ಜೈವಿಕವೈವಿಧ್ಯದ ಒಡಂಬಡಿಕೆಯ ಉದ್ದೇಶಗಳು, ಅದರ ಸಂಬಂಧಿತ ನಿಬಂಧನೆಗಳಿಗೆ ಅನುಗುಣವಾಗಿ ಅನುಸರಿಸಬೇಕಾದವು, ಜೈವಿಕವೈವಿಧ್ಯತೆಯ ಸಂರಕ್ಷಣೆ ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಅನುವಂಶಿಕ ಸಂಪನ್ಮೂಲಗಳ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ನ್ಯಾಯಯುತ ಮತ್ತು ಸಮನಾದ ಹಂಚಿಕೆ, ಅನುವಂಶಿಕ ಸಂಪನ್ಮೂಲಗಳಿಗೆ ಪ್ರವೇಶ ಮತ್ತು ಸಂಬಂಧಿತ ತಂತ್ರಜ್ಞಾನಗಳ ಸೂಕ್ತ ವರ್ಗಾವಣೆಯ ಮೂಲಕ ಆ ಸಂಪನ್ಮೂಲಗಳ ಮೇಲಿನ ಎಲ್ಲಾ ಹಕ್ಕುಗಳನ್ನು ಮತ್ತು ತಂತ್ರಜ್ಞಾನಗಳನ್ನು ಗಣನೆಗೆ ತೆಗೆದುಕೊಂಡು ಹೋಗುವುದು ಸೂಕ್ತ ಹಣದ ಮೂಲಕ.

ಜೈವಿಕವೈವಿಧ್ಯತೆಯ ಸಮಾವೇಶ (ಸಿಬಿಡಿ) 29ನೇ ಡಿಸೆಂಬರ್ 1993ರಂದು ಜಾರಿಗೆ ಬಂದಿತು. ಇದು ಮೂರು ಮುಖ್ಯ ಉದ್ದೇಶಗಳನ್ನು ಹೊಂದಿದೆ.

1. ಜೈವಿಕವೈವಿಧ್ಯತೆಯ ಸಂರಕ್ಷಣೆ.
2. ಜೈವಿಕವೈವಿಧ್ಯತೆಯ ಘಟಕಗಳ ಸುಸ್ಥಿರ ಬಳಕೆ
3. ಜೈವಿಕವೈವಿಧ್ಯ ಸಂಪನ್ಮೂಲಗಳ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ನ್ಯಾಯಯುತ ಮತ್ತು ನ್ಯಾಯಸಮ್ಮತ ಹಂಚಿಕೆ.

## 1.2 ಜೀವವೈವಿಧ್ಯ ಅಧಿನಿಯಮ 2002

ಭಾರತವು ಅಂತರಾಷ್ಟ್ರೀಯ ಜೈವಿಕವೈವಿಧ್ಯತೆ ಒಡಂಬಡಿಕೆಯನ್ನು ಅನುಸರಿಸುವ ಭಾದ್ಯತೆ ಮತ್ತು ಉದ್ದೇಶದಿಂದ ಜೈವಿಕವೈವಿಧ್ಯ ಅಧಿನಿಯಮ 2002ನ್ನು ದಿನಾಂಕ 5ನೇ ಫೆಬ್ರವರಿ 2003ರಿಂದ ರಾಷ್ಟ್ರದ ಸಂಸತ್ತಿನ ಅಧಿಸೂಚನೆಯನ್ವಯ ಜಾರಿಗೊಳಿಸಿದ್ದು, ಫೆಬ್ರವರಿ 5, 2003ರಂದು ರಾಷ್ಟ್ರಪತಿಗಳ ಅಂಕಿತದ ಮೇರೆಗೆ ಜಾರಿಗೆ ಬಂದಿತು. ಈ ಕಾಯಿದೆಯ ಉದ್ದೇಶ "ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ, ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆಯ ಲಾಭಾಂಶದ ನ್ಯಾಯ ಸಮ್ಮತ ಹಂಚಿಕೆ ಮತ್ತು ಇದಕ್ಕೆ ಹೊಂದಿಕೊಂಡ ಸಾಂಪ್ರದಾಯಿಕ ಜ್ಞಾನದ ಬಳಕೆಯಿಂದ ಉಂಟಾಗುವ ಲಾಭದ ನ್ಯಾಯಸಮ್ಮತವಾದ ಹಂಚಿಕೆ"ಯಾಗಿರುತ್ತದೆ.

## 1.3 ರಾಷ್ಟ್ರೀಯ ಜೀವವೈವಿಧ್ಯತೆಯ ಪ್ರಾಧಿಕಾರ:

ಜೈವಿಕವೈವಿಧ್ಯ ಅಧಿನಿಯಮ 2002ರ ಪರಿಣಾಮಕಾರಿ ಅನುಷ್ಠಾನಕ್ಕೆ, ಮೂರು ಹಂತದ ಸಾಂಸ್ಥಿಕ ರಚನೆಯನ್ನು ಸ್ಥಾಪಿಸಲಾಗಿದೆ. ಕೇಂದ್ರದಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (ಎನ್‌ಬಿಎ), ರಾಜ್ಯ ಮಟ್ಟದಲ್ಲಿ ರಾಜ್ಯ ಜೀವವೈವಿಧ್ಯ ಮಂಡಳಿಗಳು ಮತ್ತು ಸ್ಥಳೀಯ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಧಿನಿಯಮವನ್ನು ಅನುಷ್ಠಾನಗೊಳಿಸುತ್ತವೆ. ಭಾರತ ಸರ್ಕಾರವು 2003ರಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (ಎನ್‌ಬಿಎ) ಎಂಬ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಿತು. ಇದು ಭಾರತ ಸರ್ಕಾರಕ್ಕೆ ಕಾಯ್ದೆಯ ಸುಗಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಿಯಂತ್ರಣ ಹಾಗೂ ಸಲಹಾ ಕಾರ್ಯಗಳನ್ನು ನಿರ್ವಹಿಸುತ್ತದೆ.

## 2 ಕರ್ನಾಟಕ ಜೀವವೈವಿಧ್ಯ ಮಂಡಳಿ:

ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ 22ರ ಪ್ರಕಾರ ಜೂನ್ 2003ರಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಸ್ಥಾಪನೆಯಾಗಿದ್ದು, ಆಗಸ್ಟ್ 1, 2003ರಿಂದ ಕಾರ್ಯನಿರ್ವಹಿಸಲು ಆರಂಭಿಸಿತು. ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ 63ರಡಿಯಲ್ಲಿ ನೀಡಲಾದ ಅಧಿಕಾರಗಳನ್ವಯ 2005ರಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ಜೈವಿಕವೈವಿಧ್ಯ ನಿಯಮಗಳನ್ನು ಸರ್ಕಾರಿ ಆದೇಶ ಸಂ: ಎಫ್ಇಇ / ಇಎನ್‌ವಿ 2005 ದಿನಾಂಕ 03/05/2006ರಂದು ಜಾರಿಗೆ ತಂದಿತು.

### 2.1 ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಾರ್ಯಚಟುವಟಿಕೆಗಳು:

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಪ್ರಮುಖ ಉದ್ದೇಶವು ರಾಜ್ಯದ ಶ್ರೀಮಂತ ಜೀವವೈವಿಧ್ಯತೆಯ ದಾಖಲೀಕರಣಕ್ಕಾಗಿ ಸಾಂಸ್ಥಿಕ ಸ್ವರೂಪವನ್ನು ರಚನೆ ಮಾಡುವುದು, ಸುಸ್ಥಿರ ಬಳಕೆ, ಲಾಭಗಳ ನಿಷ್ಪಕ್ಷಪಾತ ಹಂಚಿಕೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ 23ರಂತೆ ರಾಜ್ಯ ಜೀವವೈವಿಧ್ಯ ಮಂಡಳಿಯು ಈ ಕೆಳಕಂಡಂತೆ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ.

1. ಜೈವಿಕವೈವಿಧ್ಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿದ ಯಾವುದೇ ಮಾರ್ಗದರ್ಶನ ಸೂತ್ರಗಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
2. ಯಾವುದೇ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ, ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ನೀಡುವುದು.
3. ಈ ಅಧಿನಿಯಮದ ಇತರೆ ಉಪಬಂಧಗಳ ಅಗತ್ಯಪಾಲನೆ ಹಾಗೂ ರಾಜ್ಯ ಸರ್ಕಾರವು ಸೂಚಿಸುವ ಇತರ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವುದು.



**2.2 ಮಂಡಳಿಯ ರಚನೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಅಧ್ಯಕ್ಷರ ನೇತೃತ್ವದಲ್ಲಿ ಏಳು ಸದಸ್ಯರನ್ನು ಒಳಗೊಂಡಿದೆ. ಈ ಸದಸ್ಯರುಗಳಲ್ಲಿ ಕರ್ನಾಟಕ ಸರ್ಕಾರದ ಸಂಬಂಧಿತ ಇಲಾಖೆಗಳಿಂದ ನಾಲ್ವರು ಪದನಿಮಿತ್ತ ಸದಸ್ಯರು ಹಾಗೂ ಜೀವವೈವಿಧ್ಯತೆಗೆ ಸಂಬಂಧಿತ ಕ್ಷೇತ್ರಗಳಲ್ಲಿ ತಜ್ಞರನ್ನು ಒಳಗೊಂಡ ನಾಲ್ವರು ಅಧಿಕಾರೇತರ ಸದಸ್ಯರು ಸೇರಿದ್ದಾರೆ. ಅರಣ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮತ್ತು ಔಷಧಿ ನಿಯಂತ್ರಣ ಇಲಾಖೆಯಿಂದ ಮೂವರು ವಿಶೇಷ ಆಹ್ವಾನಿತರಿದ್ದು ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ಸಂಚಾಲಕರಿದ್ದಾರೆ.

ಶ್ರೀಮತಿ ಅನಿತಾ ಎಸ್. ಅರೇಕಲ್, ಭಾ.ಅ.ಸೇ, ಇವರು ದಿನಾಂಕ 28/07/2021ರಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಹಾಗೇಯೇ ಮಂಡಳಿ ಸಭೆಯಲ್ಲಿ ಸಂಚಾಲಕರಾಗಿರುತ್ತಾರೆ.

**ಶ್ರೀ. ಅನಂತ ಹೆಗಡೆ ಆಶೀಸರ, ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರು ಅಧ್ಯಕ್ಷರ ಸ್ಥಾನದಿಂದ ದಿನಾಂಕ 13/12/2021ರಂದು ವಯೋನಿವೃತ್ತಿ ಹೊಂದಿರುತ್ತಾರೆ.**

**ಶ್ರೀ ವಿಜಯ್ ಮೋಹನ್ ರಾಜ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ಸರ್ಕಾರದ ಆದೇಶ ಸಂ ಅಪಜೀ 172 ಇಎನ್‌ವಿ 2021ರ ದಿನಾಂಕ 13/12/2021ರಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡಿರುತ್ತಾರೆ.**

| ಕ್ರ.ಸಂ | **ಹೆಸರು ಮತ್ತು ಪದನಾಮ** | **ಸ್ಥಾನ** |
|---|---|---|
| 1 | ಶ್ರೀ ವಿಜಯ್ ಮೋಹನ್ ರಾಜ್, ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ, 4ನೇ ಮಹಡಿ, ವನವಿಕಾಸ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು. | **ಅಧ್ಯಕ್ಷರು** |
| 2 | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಕಾರ್ಯಪಡೆ ಮುಖ್ಯಸ್ಥರು, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-03 | **ಪದನಿಮಿತ್ತ ಸದಸ್ಯರು** |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. | **ಪದನಿಮಿತ್ತ ಸದಸ್ಯರು** |
| 4 | ಆಯುಕ್ತರು, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ (ಆಯುಷ್) ಧನ್ವಂತರಿ ರಸ್ತೆ, ಆನಂದ್‌ರಾವ್ ವೃತ್ತ, ಬೆಂಗಳೂರು-09 | **ಪದನಿಮಿತ್ತ ಸದಸ್ಯರು** |
| 5 | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. | **ಪದನಿಮಿತ್ತ ಸದಸ್ಯರು** |
| 6 | ಡಾ.ಸಿ.ಜಿ.ಕುಶಾಲಪ್ಪ, ಪ್ರಾಧ್ಯಾಪಕರು ಮತ್ತು ಡೀನ್, ಅರಣ್ಯ ಕಾಲೇಜು ಪೊನ್ನಂಪೇಟೆ, ಕೊಡಗು ಜಿಲ್ಲೆ. | **ಅಧಿಕಾರೇತರ ಸದಸ್ಯರು** |
| 7 | ಡಾ. ಪ್ರಕಾಶ್ ಮೇಸ್ತ, ನಂ.369/ ಏಸು ಬಂದರು, ಕೆಳಗಿನ ಪಾಳ್ಯ, | **ಅಧಿಕಾರೇತರ ಸದಸ್ಯರು** |

| | | |
|---|---|---|
| | ತ್ರಿಸೂಲ್ ಪ್ರೇಂಡ್ಸ್ ಹಿಂದೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ – 581334 | |
| 8 | ಶ್ರೀ ಕೆ. ವೆಂಕಟೇಶ್, ಸಂಯೋಜಕರು, ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ ಅಂಚೆ, ವರದಾಮೂಲ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | **ಅಧಿಕಾರೇತರ ಸದಸ್ಯರು** |
| 9 | ಶ್ರೀ ಜಿ.ಎಸ್. ಯಾದವ್, ಭಾ.ಅ.ಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-03 | **ವಿಶೇಷ ಆಹ್ವಾನಿತರು** |
| 10 | ಶ್ರೀ ಬಿ.ಟಿ. ಖಾನಾಪುರೆ, ಔಷಧಿ ನಿಯಂತ್ರಣಾಧಿಕಾರಿಗಳು, ಔಷಧಿ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು | **ವಿಶೇಷ ಆಹ್ವಾನಿತರು** |
| 11 | ಶ್ರೀ ಯಾಲಕ್ಕಿ ಗೌಡ, ನಿರ್ದೇಶಕರು (ಅಭಿವೃದ್ಧಿ), ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು-560009 | **ವಿಶೇಷ ಆಹ್ವಾನಿತರು** |
| 12 | ಶ್ರೀಮತಿ ಅನಿತಾ ಎಸ್. ಅರೆಕಲ್, ಭಾ.ಅ.ಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿ ಕರ್ನಾಟಕ ಜೀವವೈವಿಧ್ಯ ಮಂಡಳಿ, ನೆಲಮಹಡಿ, ವನವಿಕಾಸ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು | **ಸಂಚಾಲಕರು** |

## 2.3 ಮಂಡಳಿಯ ಸಿಬ್ಬಂದಿಗಳ ವಿವರ

| ಕ್ರ.ಸಂ | ಹುದ್ದೆಗಳು | ಜವಾಬ್ದಾರಿಗಳು |
|---|---|---|
| 1 | ಅಧ್ಯಕ್ಷರು | ಮಂಡಳಿಯ ಮುಖ್ಯಸ್ಥರು |
| 2 | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿ | ಮಂಡಳಿಯ ಆಡಳಿತ ಮೇಲ್ವಿಚಾರಣೆ |
| 3 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಜನತಾ ಜೀವವೈವಿಧ್ಯ ದಾಖಲಾತಿಗಳ ಮೇಲ್ವಿಚಾರಣೆ |
| 4 | ಉಪನಿರ್ದೇಶಕರು (ಆಯುಷ್) | ಔಷಧೀಯ ಗಿಡ ಮೂಲಿಕೆಗಳು ಹಾಗೂ ಎ.ಬಿ.ಎಸ್‌ನ ಮೇಲ್ವಿಚಾರಣೆ |
| 5 | ಉಪನಿರ್ದೇಶಕರು (ತೋಟಗಾರಿಕೆ) | ತಾಂತ್ರಿಕ/ ಸಂಶೋಧನಾ ಅಧ್ಯಯನಗಳು/ ಜೀವವೈವಿಧ್ಯ ಪಾರಂಪರಿಕ ತಾಣಗಳು |
| 6 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಆಡಳಿತಾಧಿಕಾರಿ | ಆಡಳಿತ ಹಾಗೂ ಲೆಕ್ಕ ನಿರ್ವಹಣೆ |
| 7 | ಲೆಕ್ಕ ಅಧೀಕ್ಷಕರು | ಲೆಕ್ಕ ನಿರ್ವಹಣೆ |
| 8 | ಸಂಶೋಧಕ ಸಹಾಯಕರು / ರೀಡರ್ (ಪ್ರಾಣಿಶಾಸ್ತ್ರ) | ಸಂಶೋಧನಾ ಯೋಜನೆಗಳು / ಜೀವವೈವಿಧ್ಯ ಪಾರಂಪರಿಕ ತಾಣಗಳು ಕಾರ್ಯನಿರ್ವಹಣೆ |

| | | |
|---|---|---|
| 9 | ಸಂಶೋಧಕ ಸಹಾಯಕರು / ರೀಡ್‌ರ್ (ಸಸ್ಯಶಾಸ್ತ್ರ) | ಸಂಶೋಧನಾ ಯೋಜನೆಗಳು, ಜೀವವೈವಿಧ್ಯ ಪಾರಂಪರಿಕ ತಾಣಗಳು ಹಾಗೂ ಎಬಿಎಸ್ ಕಾರ್ಯನಿರ್ವಹಣೆ |
| 10 | ತಾಂತ್ರಿಕ ಸಹಾಯಕರು | ಎ.ಬಿ.ಎಸ್. ಕಾರ್ಯನಿರ್ವಹಣೆ |
| 11 | ತಾಂತ್ರಿಕ ಸಹಾಯಕರು | ಎ.ಬಿ.ಎಸ್. ಕಾರ್ಯನಿರ್ವಹಣೆ |
| 12 | ತಾಂತ್ರಿಕ ಸಹಾಯಕರು | ಬಿಎಂಸಿ ಮತ್ತು ಪಿಬಿಆರ್‌ನ ಕಾರ್ಯನಿರ್ವಹಣೆ ಹಾಗೂ ತರಬೇತಿ ನಡೆಸುವುದು. |
| 13 | ಲೆಕ್ಕ ಮೇಲ್ವಿಚಾರಕರು | ಲೆಕ್ಕ ಕಾರ್ಯನಿರ್ವಹಣೆ |
| 14 | ಕಾರ್ಯನಿರ್ವಾಹಕ ಸಹಾಯಕರು ಹಾಗೂ ಸದಸ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕರು | ಸದಸ್ಯ ಕಾರ್ಯದರ್ಶಿಗಳು ಸೂಚಿಸುವ ಕಾರ್ಯಗಳು |
| 15 | ಕಾರ್ಯನಿರ್ವಾಹಕ ಸಹಾಯಕರು | ಆಡಳಿತ, ಲೆಕ್ಕ ಸಾಮಾನ್ಯ ಕೆಲಸ, ಆರ್.ಟಿ.ಐ, ಸ್ಟಾಕ್ ನಿರ್ವಹಣೆ |
| 16 | ಕಾರ್ಯನಿರ್ವಾಹಕ ಸಹಾಯಕರು ಹಾಗೂ ಮಾನ್ಯ ಅಧ್ಯಕ್ಷರ ಆಪ್ತ ಸಹಾಯಕರು | ಮಾನ್ಯ ಅಧ್ಯಕ್ಷರು ಸೂಚಿಸುವ ಕಾರ್ಯಗಳು |
| 17 | ಕಾರ್ಯನಿರ್ವಾಹಕ ಸಹಾಯಕರು | ಎ.ಬಿ.ಎಸ್. ಕಾರ್ಯನಿರ್ವಹಣೆ |
| 18 | ಡಾಟಾ ಎಂಟ್ರಿ ಆಪರೇಟರ್ | ಇನ್‌ವರ್ಡ್/ಔಟ್‌ವರ್ಡ್,ಟೈಪಿಂಗ್ ಕಾರ್ಯಗಳು |
| 19 | ಡಾಟಾ ಎಂಟ್ರಿ ಆಪರೇಟರ್ | ಅಧ್ಯಕ್ಷರ ಶಾಖೆಯ ಟೈಪಿಂಗ್ ಕಾರ್ಯಗಳು |
| 20 | ವಾಹನ ಚಾಲಕರು (4 ಹುದ್ದೆಗಳು) | ವಾಹನ ಚಾಲನೆ (3 ಹುದ್ದೆ ಮಂಡಳಿಗೆ ಹಾಗೂ ಒಂದು ಹುದ್ದೆ ಅಧ್ಯಕ್ಷರ ಕಛೇರಿಗೆ) |
| 21 | ದಲಾಯತ್ (5 ಹುದ್ದೆಗಳು) | ದಲಾಯತ್‌ರ ಕಾರ್ಯನಿರ್ವಹಣೆ (3 ಹುದ್ದೆ ಮಂಡಳಿಗೆ ಹಾಗೂ 2 ಹುದ್ದೆ ಅಧ್ಯಕ್ಷರ ಕಛೇರಿಗೆ) |

**3. ಮಂಡಳಿಯ ಸಭೆಗಳು**

2021-22ನೇ ಸಾಲಿನಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ವಿವಿಧ ವಿಷಯಗಳ ಪರಿಶೀಲನೆ, ಚಟುವಟಿಕೆಗಳ ಬಗ್ಗೆ ಚರ್ಚಿಸಲು ಹಾಗೂ ನಿರ್ಣಯಗಳನ್ನು ಕೈಗೊಳ್ಳಲು ಕೆಳಕಂಡ ಮೂರು ಮಂಡಳಿ ಸಭೆಗಳನ್ನು ನಡೆಸಿತು.

1. ದಿನಾಂಕ 30/06/2021ರಂದು ಮಂಡಳಿಯ 47ನೇ ಸಭೆ
2. ದಿನಾಂಕ 21/09/2021ರಂದು ಮಂಡಳಿಯ 48ನೇ ಸಭೆ
3. ದಿನಾಂಕ 06/01/2022ರಂದು ಮಂಡಳಿಯ 49ನೇ ಸಭೆ

**4. 2021-22ನೇ ಸಾಲಿನಲ್ಲಿ ಮಂಡಳಿಯು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ವಿಡಿಯೋ ಕಾನ್‌ಫರೆನ್ಸ್‌ಗಳು ಹಾಗೂ ಕ್ಷೇತ್ರ ಭೇಟಿ**

| | | |
|---|---|---|
| 1 | 28/04/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 2 | 11/05/2021 | ಎಬಿಎಸ್‌ನ ಪರಿಣಿತ ತಜ್ಞರ ಸಮಿತಿ ಸಭೆ |
| 3 | 25/06/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 4 | 28/06/2021 | ಜನತಾ ಜೀವವೈವಿಧ್ಯ ದಾಖಲಾತಿ ಹಾಗೂ ಬಿಎಂಸಿಗಳ ಪ್ರಗತಿ ಕುರಿತು ಎಲ್ಲಾ ಜಿಲ್ಲೆಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ (ಸಾಮಾಜಿಕ ಅರಣ್ಯ) ವಿಡಿಯೋ ಕಾನ್‌ಫರೆನ್ಸ್. |
| 5 | 30/06/2021 | ಮಂಡಳಿಯ 47ನೇ ಸಭೆ. |
| 6 | 13/07/2021 | ಜನತಾ ಜೀವವೈವಿಧ್ಯ ದಾಖಲಾತಿ ಹಾಗೂ ಬಿಎಂಸಿಗಳ ಪ್ರಗತಿ ಕುರಿತು ಎಲ್ಲಾ ಜಿಲ್ಲೆಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ (ಸಾಮಾಜಿಕ ಅರಣ್ಯ) ವಿಡಿಯೋ ಕಾನ್‌ಫರೆನ್ಸ್. |
| 7 | 20/07/2021 | ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಂಡಳಿಯ ಕಾರ್ಯಚಟುವಟಿಕೆಗಳ ಪರಿಶೀಲನೆ ಕುರಿತು ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಭೆ. |
| 8 | 28/07/2021 | ಶ್ರೀಮತಿ ಅನಿತಾ ಎಸ್ ಅರೇಕಲ್ ಭಾ.ಅ.ಸೇ.ರವರು ಸದಸ್ಯ ಕಾರ್ಯದರ್ಶಿಗಳ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ. |
| 9 | 31/07/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಂಡಳಿಯ ಕಾರ್ಯಚಟುವಟಿಕೆಗಳ ಪರಿಶೀಲನೆ ಕುರಿತು ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಭೆ. |
| 10 | 02/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಗತಿ ಪರಿಶೀಲನಾ ಸಭೆ. |
| 11 | 03/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಗತಿ ಪರಿಶೀಲನಾ ಸಭೆ. |
| 12 | 09/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಗತಿ ಪರಿಶೀಲನಾ ಸಭೆ. |
| 13 | 10/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಗತಿ ಪರಿಶೀಲನಾ ಸಭೆ. |
| 14 | 16/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಗತಿ ಪರಿಶೀಲನಾ ಸಭೆ. |

| | | |
|---|---|---|
| 15 | 19/08/2021 | ಸದಸ್ಯ ಕಾರ್ಯದರ್ಶಿಗಳು ನವದೆಹಲಿಗೆ ಭೇಟಿ ನೀಡಿ ಅಲ್ಲಿ ಎನ್.ಎಂ.ಪಿ.ಬಿ ಕಛೇರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಜೊತೆಯಲ್ಲಿ ಯೋಜನೆ ಕುರಿತು ಚರ್ಚೆ. |
| 16 | 25/08/2021 | ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಲೆಕ್ಕಶಾಖೆಯಲ್ಲಿ ಉಪಯುಕ್ತತಾ ಪ್ರಮಾಣ ಪತ್ರಗಳ ನಿರ್ವಹಣೆ, ಸರ್ಕಾರದಿಂದ ಮಂಜೂರಾದ ಅನುದಾನದಲ್ಲಿ ಮಂಡಳಿಯಲ್ಲಿ ಉಳಿದಿರುವ ಬಾಕಿ ಮೊತ್ತದ ಲೆಕ್ಕ ಶೀರ್ಷಿಕೆವಾರು ವಿಂಗಡಣೆ ಕುರಿತ ಕೆಲಸ ಕಾರ್ಯಗಳನ್ನು ತಾಂತ್ರಿಕ ಕಾರ್ಯನಿರ್ವಾಹಕರಿಗೆ ಹಂಚಿಕೆ ಮಾಡಿರುವ ಕುರಿತ ಪರಿಶೀಲನಾ ಸಭೆ. |
| 17 | 27/08/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 18 | 30/08/2021 | ಸದಸ್ಯ ಕಾರ್ಯದರ್ಶಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಮಾಕಳಿ ದುರ್ಗಕ್ಕೆ ಭೇಟಿ ನೀಡಿ ಅಳಿವಿನಂಚಿನಲ್ಲಿರುವ ಪ್ರಬೇಧಗಳ ಕುರಿತು ಅಲ್ಲಿನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಚರ್ಚೆ ಹಾಗೂ ವೀಕ್ಷಣೆ. |
| 19 | 03/09/2021 | ಆಂಧ್ರ ರಾಜ್ಯ ಜೀವವೈವಿಧ್ಯ ಮಂಡಳಿಯ ಮಾನ್ಯ ಅಧ್ಯಕ್ಷರೊಂದಿಗೆ ಸಮಾಲೋಚನಾ ಸಭೆ ಮಂಡಳಿಯ ಕಾರ್ಯಚಟುವಟಿಕೆಗಳು ಹಾಗು ಅಳಿವಿನಂಚಿನಲ್ಲಿರುವ ಪ್ರಭೇದಗಳ ಕುರಿತು ಚರ್ಚೆ. |
| 20 | 07/09/2021 | ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ ಕುರಿತು ಗೂಗಲ್ ಮೀಟ್ ಸಭೆ. |
| 21 | 13/09/2021 | ಸದಸ್ಯ ಕಾರ್ಯದರ್ಶಿಗಳು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವರಾಯಶೆಟ್ಟಿಪುರ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳೊಂದಿಗೆ ಜೀವವೈವಿಧ್ಯ ಸಂರಕ್ಷಣೆ ಕುರಿತು ಚರ್ಚೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಪುಸ್ತಕ ವಿತರಣೆ. |
| 22 | 14/09/2021 | ಸದಸ್ಯ ಕಾರ್ಯದರ್ಶಿಗಳು ಮೈಸೂರು ಜಿಲ್ಲೆಯ ಹೆಚ್.ಡಿಕೋಟೆ ತಾಲ್ಲೂಕಿನ ಅಂತರಸಂತೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳೊಂದಿಗೆ ಜೀವವೈವಿಧ್ಯ ಸಂರಕ್ಷಣೆ ಕುರಿತು ಚರ್ಚೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಪುಸ್ತಕ ವಿತರಣೆ. |
| 23 | 21/09/2021 | ಮಂಡಳಿಯ 48ನೇ ಸಭೆ |
| 24 | 05/10/2021 | ರಾಮನಗರದ ರಾಮೇದೇವರ ಬೆಟ್ಟದಲ್ಲಿ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ |
| 25 | 28/10/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |

| | | |
|---|---|---|
| 26 | 11/11/2021<br>12/11/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರದವರು ಕರ್ನಾಟಕ ಜೀವವೈವಿಧ್ಯ ಮಂಡಳಿಯೊಂದಿಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಅರಣ್ಯಾಧಿಕಾರಿಗಳಿಗೆ ಗಿಡಮೂಲಿಕೆಗಳ ಸುಸ್ಥಿರ ಬಳಕೆ, ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಕುರಿತು ಕಾರ್ಯಾಗಾರ. |
| 27 | 18/11/2021 ರಿಂದ 22/11/2021 ರವರೆಗೆ | ಲಕನೌನ CSIR-CIMAPಗೆ ಭೇಟಿ ನೀಡಿ ಅಲ್ಲಿನ ನಿರ್ದೇಶಕರಾದ ಡಾ. ಸಂಜಯ್ ಕುಮಾರ್ ಹಾಗೂ ಪ್ರಧಾನ ವಿಜ್ಞಾನಿ ಆರ್ ಕೆ. ಶ್ರೀವಾಸ್ತವರವರೊಡನೆ ಔಷಧೀಯ ಸಸ್ಯಗಳ ಕೃಷಿ, ಕೊಯ್ಲು, ನಂತರದ ನಿರ್ವಹಣೆ, ಮಾದರಿ ವಿಶ್ಲೇಷಣೆ, ಮಾರುಕಟ್ಟೆ ಬೆಳೆಸುವ ಚಟುವಟಿಕೆಗಳ ಕುರಿತು ಚರ್ಚೆ. |
| 28 | 23/11/2021 ರಿಂದ 25/11/2021 | ನವದೆಹಲಿಗೆ ಭೇಟಿ ನೀಡಿ ಅಲ್ಲಿ ಎನ್.ಇಂ.ಪಿ.ಬಿ ಕಛೇರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಡನೆ ಎನ್.ಇಂ.ಪಿ.ಬಿ ಯೋಜನೆಯ ತಯಾರಿ ಹಾಗೂ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು ಚರ್ಚೆ. |
| 29 | 30/11/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 30 | | ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಮೌಲ್ಯಮಾಪನ ಸಮಿತಿ ಸಭೆ |
| 31 | 07/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರದವರು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ ಚಾಮರಾಜನಗರ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಕುರಿತು ಕಾರ್ಯಾಗಾರ. |
| 32 | 23/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಆಯೋಜಿಸಿರುವ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯರ ಸಮ್ಮೇಳನದ ಕಾರ್ಯಾಗಾರ. |
| 33 | 28/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಆಯೋಜಿಸಿರುವ ಬೆಂಗಳೂರು ವೃತ್ತದ ಅರಣ್ಯ ಅಧಿಕಾರಿಗಳ ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಕಾಯ್ದೆ 2002ರ ಕುರಿತ ಕಾರ್ಯಾಗಾರ. |
| 34 | 29/12/2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |

| | | |
|---|---|---|
| 35 | 05/01/2022 | ಎಬಿಎಸ್ ಪರಿಣಿತ ತಜ್ಞರ ಸಮಿತಿ ಸಭೆ |
| 36 | 06/01/2022 | ಮಂಡಳಿಯ 49ನೇ ಸಭೆ |
| 37 | 27/01/2022 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಹಾಗೂ ಎಬಿಎಸ್‌ನ ಪ್ರಗತಿ ಪರಿಶೀಲನೆ ಕುರಿತು ವಿಡಿಯೋ ಕಾನ್ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 38 | 10/02/2022 | ಜೀವವೈವಿಧ್ಯ ನಿರ್ವಹಣಾ ಸಮಿತಿಯ ರಚನೆ ಮತ್ತು ಪ್ರಕಾರ್ಯಗಳ ಕುರಿತು ಎಲ್ಲಾ ಗ್ರಾಮ ಪಂಚಾಯಿತಿಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಗೆ ಸ್ಯಾಟಾಕಾಂ ಮುಖಾಂತರ ತರಬೇತಿ ಕಾರ್ಯಕ್ರಮ. |
| 39 | 25/02/2022 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಜಿಲ್ಲೆಯ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಔಷಧೀಯ ಸಸ್ಯಗಲ ಸಂರಕ್ಷಣೆ, ಸುಸ್ಥರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಕಾಯ್ದೆ 2002ರ ಕುರಿತು ಶಿವಮೊಗ್ಗ ವೃತ್ತದ ಅರಣ್ಯ ಅಧಿಕಾರಿಗಳ ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಕಾಯ್ದೆ 2002ರ ಕುರಿತ ಕಾರ್ಯಾಗಾರ. |
| 40 | 23/03/2022 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರಿನ ಯಲಹಂಕದಲ್ಲಿ ರಾಜ್ಯ ಮಟ್ಟದ ಔಷಧೀಯ ಸಸ್ಯಗಳ ಖರೀದಿದಾರರ ಹಾಗೂ ಮಾರಾಟಗಾರರ ಸಭೆ. |

**4.1 ಶ್ರೀ ಅನಂತ ಹೆಗಡೆ ಆಶೀಸರ, ಮಾನ್ಯ ಅಧ್ಯಕ್ಷರು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ವಿಡಿಯೋ ಕಾನ್ಫರೆನ್ಸ್‌ಗಳು ಹಾಗೂ ಕ್ಷೇತ್ರ ಭೇಟಿ**

| | | |
|---|---|---|
| 1 | 06-04-2021 | ಶಿವಮೊಗ್ಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು, ಜಿಲ್ಲಾ ಕೃಷಿ ಅಧಿಕಾರಿಗಳು ಕೃಷಿ ವಿಶ್ವವಿದ್ಯಾಲಯದ ಕೀಟ ತಜ್ಞರ ಜೊತೆ ಸಮಾಲೋಚನೆ ನಡೆಸಲಾಯಿತು. ಜೇನು ಕುಟುಂಬಗಳಗೆ ಬಂದಿರುವ ವೈರಸ್ ರೋಗ ತಡೆ ಪರಿಹಾರ ಕ್ರಮಗಳ ಕುರಿತು ಸಮಾಲೋಚನೆ ನಡೆಸಿದರು. |
| 2 | 07-04-2021 | ಭದ್ರಾವತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್)ಅವರ ಕಛೇರಿಗೆ ಭೇಟಿ ನೀಡಿ ಸಮಾಲೋಚನೆ ನಡೆಸಲಾಯಿತು. ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿದರು. |
| 3 | 08-04-2021 | ಸಾಗರದಲ್ಲಿ ರಾಘವೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುವ ರೈತರು ಮತ್ತು ಅರಣ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು. ಈ ಕಾರ್ಯಾಗಾರಕ್ಕೆ ಸಾಗರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್) ಪಾಲ್ಗೊಂಡಿದ್ದರು. |
| 4 | 16-04-2021 | ಶಿರಸಿಯ ಸಿ.ಸಿ.ಎಫ್. ಕಚೇರಿಯಲ್ಲಿ ಸಮಾಲೋಚನೆ ನಡೆಸಲಾಯಿತು. |

| | | |
|---|---|---|
| | | ಡೀಮ್ಡ ಅರಣ್ಯ ವ್ಯಾಪ್ತಿಯಿಂದ ಬೆಟ್ಟ ಭೂಮಿ ಹೊರಗಿಡುವ ಸರ್ಕಾರದ ಆದೇಶದ ಬಗ್ಗೆ ಹಾಗೂ ಬೇಡ್ತಿ– ವರದಾ ಯೋಜನೆ ಸ್ಥಳ ಸಮೀಕ್ಷೆ ಬಗ್ಗೆ ಎನ್.ಡಬ್ಲ್ಯು.ಡಿ.ಎ. ಅರಣ್ಯ ಇಲಾಖೆಯ ಒಪ್ಪಿಗೆ ಕೇಳಿರುವ ವಿಷಯ ಕುರಿತು ಸಮಾಲೋಚನೆ ನಡೆಸಿದರು. |
| 5 | 17–04–2021 | ಸಾಗರ ತಾಲೂಕಿನ ಆನಂದಪುರ ಬಳಿ ಇರುವ ಯಡೆಹಳ್ಳಿ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಯಿತು. ಗಂಟಿಕೊಪ್ಪ ಕಾನು ಪ್ರದೇಶಕ್ಕೆ ಭೇಟಿ ನೀಡಲಾಯಿತು. ತೀರ್ಥಹಳ್ಳಿ ತಾಲೂಕಿನ ಕೊಣಂದೂರು ಗ್ರಾಮ ಪಂಚಾಯಿತಿ ತಲುಪಿ ಹಲವನಹಳ್ಳಿ ಕಾನು ಅರಣ್ಯ, ಕೆರೆ ಪ್ರದೇಶಕ್ಕೆ ಭೇಟಿ ನೀಡಿದರು. |
| 6 | 21–04–2021 | ಡಿ.ಸಿ.ಎಫ್. ದಾವಣಗೆರೆ, ಕಮೀಷನರ್ ಮಹಾನಗರ ಪಾಲಿಕೆ ಅವರ ಜೊತೆ ಕುಂದವಾಡಕೆರೆ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. ಹಂಸಭಾವಿ ಇನ್ನಿತರ ಡೀಮ್ಡ್ ಅರಣ್ಯ ವೀಕ್ಷಣೆ ಮಾಡಿ ಸಂಜೆ 4:15ಕ್ಕೆ ಹಾನಗಲ್ ತಾಲ್ಲೂಕು ಪಂಚಾಯತ್‌ಗೆ ತೆರಳಲಾಯಿತು. |
| 7 | 03–05–2021 | ತೀರ್ಥಹಳ್ಳಿ ತಹಶೀಲ್ದಾರ್ ಜೊತೆ ಕೋರ್ಟ್ ವಿಷಯವಾಗಿ ಚರ್ಚೆ ನಡೆಸಿದರು. |
| 8 | 06–05–2021 | ಜೀವವೈವಿಧ್ಯ ಅರಣ್ಯ ಯೋಜನೆ ಬಗ್ಗೆ ಚರ್ಚೆ. |
| 9 | 12–05–2021 | ಸೊರಬ ತಹಶಿಲ್ದಾರ್ ಜೊತೆ ಕಾನು ಅರಣ್ಯದ ಬಗ್ಗೆ ಚರ್ಚೆ. |
| 10 | 14–05–2021 | ಭದ್ರಾವತಿ ಆಕಾಶವಾಣಿ ಕಛೇರಿಗೆ ಭೇಟಿ. |
| 11 | 18–05–2021 | ಮುಂಡಗೋಡು ತಾಲ್ಲೂಕು ಪಂಚಾಯತ್ ಭೇಟಿ. |
| 12 | 22–05–2021 | ಸಾಗರದ ಉಳ್ಳೂರು ಕೆರೆ ಆಂದೋಲನ ಸಮ್ಮೇಳನ ಸಭೆ. |
| 13 | 01–06–2021 | ಶಿರಸಿಯಲ್ಲಿ ಅಂಗವಿಕಲ ಮಕ್ಕಳಿಗೆ ಆಹಾರ ಕಿಟ್ ವಿತರಣೆ ಮಾಡಿದರು. |
| 14 | 02–06–2021 | ಕೋವಿಡ್ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾನ್ಯ ಸಭಾಪತಿಗಳೊಂದಿಗೆ ಭಾಗವಹಿಸಿದ್ದರು. |
| 15 | 05–06–2021 | ಪರಿಸರ ದಿನದಂದು ಪಟ್ಟಣದ ಹೊಳೆ ನದಿ ತೀರದಲ್ಲಿ ಪಾದಯಾತ್ರೆ ಜಾಗೃತಿ ನಡೆಸಿದರು. |
| 16 | 08–06–2021 | ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆಗೆ ತದಡಿ, ಅಘನಾಶಿನಿ, ಕಾಗಲ್, ಹೊಲ್ಲನ್‌ಗದ್ದೆ, ಹೊನ್ನಳ್ಳಿ ಸಮುದ್ರ ತೀರಗಳಿಗೆ ಭೇಟಿ ನೀಡಿದರು. |
| 17 | 11–06–2021 | ಶಿವಮೊಗ್ಗ ಆನಂದಪುರ ಸಮೀಪ ಗಂಟಿಕೊಪ್ಪ ಕಾನು ಪ್ರದೇಶಕ್ಕೆ ಭೇಟಿ ನೀಡಿದರು. |
| 18 | 19–06–2021 | ಬಾಳೆಹೊನ್ನೂರು ಗ್ರಾಮ ಪಂಚಾಯತ್ ಜೀವವೈವಿಧ್ಯ ನಿರ್ವಹಣಾ ಸಮಿತಿ ಅಧ್ಯಕ್ಷರು, ಸದಸ್ಯರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. ಎ.ಸಿ.ಎಫ್ ಕಛೇರಿಯಲ್ಲಿ ಡಿ.ಎಫ್.ಒ, ಎ.ಸಿ.ಎಫ್, ಆರ್.ಎಫ್.ಒ ಇವರುಗಳ ಜೊತೆಗೆ ಜೀವವೈವಿಧ್ಯ ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಿದರು. |
| 19 | 20–06–2021 | ಸಾಗರಕ್ಕೆ ತೆರಳಿ ಸಾಗರ ತಾಲ್ಲೂಕು ಉಳ್ಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಕೊಪ್ಪ, ಚಿತ್ರಟ್ಟೆ, ಮತ್ತಿಕೊಪ್ಪ ಗ್ರಾಮ ಅರಣ್ಯಗಳಿಗೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ಡಿ.ಎಫ್.ಒ, ಎ.ಸಿ.ಎಫ್, ಆರ್.ಎಫ್.ಒ ಸಾಗರ ಇವರುಗಳು ಉಪಸ್ಥಿತರಿದ್ದರು. |

| | | |
|---|---|---|
| 20 | 24-06-2021 | ದಿನಾಂಕ: 24-06-2021 ರಂದು ಶಿರಸಿ ಅಸಿಸ್ಟೆಂಟ್ ಕಮೀಷನರ್ ಕಛೇರಿಯಲ್ಲಿ ಜಾಜಿಗುಡ್ಡ ಮತ್ತು ಮತ್ತಿಘಟ್ಟ ಭೂಕುಸಿತ ಪ್ರಕರಣಗಳ ಪರಿಹಾರ ಪುನರ್ವಸತಿ ಬಗ್ಗೆ ಅಸಿಸ್ಟೆಂಟ್ ಕಮೀಷನರ್ ಮತ್ತು ತಹಶಿಲ್ದಾರ್ ಜೊತೆಗೆ ಸಮಾಲೋಚನೆ ನಡೆಸಿದರು. |
| 21 | 25-06-2021 | ದಿನಾಂಕ: 25-06-2021 ರಂದು ಯಲ್ಲಾಪುರ ತಾಲ್ಲೂಕು ಪಂಚಾಯತ್ ಕಛೇರಿಗೆ ಭೇಟಿ ನೀಡಲಆದ್ದಾರೆ. ಕಾರ್ಯನಿರ್ವಹಣಾಧಿಕಾರಿಗಳು, ಆರ್.ಎಫ್.ಒ ಸಾಮಾಜಿಕ ಅರಣ್ಯಾ ಹಾಗೂ ಜೀವವೈವಿಧ್ಯ ಸಮಿತಿ ಅಧ್ಯಕ್ಷರು, ಸದಸ್ಯರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. ನಂತರ 4:45ಕ್ಕೆ ಯಲ್ಲಾಪುರ ಡಿ.ಸಿ.ಎಫ್ ಕಛೇರಿಯಲ್ಲಿ ಡಿ.ಸಿ.ಎಫ್ ಯಲ್ಲಾಪುರ, ಎ.ಸಿ.ಎಫ್, ಆರ್.ಎಫ್.ಒ ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. |
| 22 | 03-07-2021 | ದಿನಾಂಕ: 03-07-2021 ರಂದು ಬೆಳಗ್ಗೆ 10:30ಕ್ಕೆ ಡಿ.ಸಿ.ಎಫ್ ಕೋಲಾರ ಕಛೇರಿಯಲ್ಲಿ ಡಿ.ಸಿ.ಎಫ್ ಟೆರಿಟೋರಿಯಲ್, ಎ.ಸಿ.ಎಫ್, ಆರ್.ಎಫ್.ಒ ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. 11:30ಕ್ಕೆ ಕೋಲಾರ ಡಿ.ಸಿ ಕಛೇರಿಯಲ್ಲಿ ಡಿ.ಸಿ, ಜಿಲ್ಲಾ ಪಂಚಾಯತ್ ಸಿ.ಇ.ಒ, ಜಿಲ್ಲಾ ಮಾಲಿನ್ಯ ನಿಯಂತ್ರಣಾಧಿಕಾರಿಗಳು, ಡಿ.ಸಿ.ಎಫ್ (ಟೆರಿಟೋರಿಯಲ್), ಡಿ.ಸಿ.ಎಫ್ (ಸಾಮಾಜಿಕ ಅರಣ್ಯಾ), ಜಿಲ್ಲಾ ಕೃಷಿ ಅಧಿಕಾರಿಗಳು, ಜಿಲ್ಲಾ ತೋಟಗಾಕೆ ಅಧಿಕಾರಿಗಳು, ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳು, ಜಿಲ್ಲಾ ನಗರಕೋಶ ಮುಖ್ಯಸ್ಥರು ಇವರುಗಳ ಜೊತೆ ಅರಣ್ಯಾ, ಜೀವವೈವಿಧ್ಯ, ಪರಿಸರ, ಕೆರೆ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಿದರು. |
| 23 | 07-07-2021 | ದಿನಾಂಕ: 07-07-2021 ರಂದು ಮಧ್ಯಾಹ್ನ 3.00 ಘಂಟೆಗೆ ಕಾರ್ಯನಿರ್ವಹಣಾಧಿಕಾರಿಗಳು, ಸಿದ್ದಾಪುರ ಕಛೇರಿಯಲ್ಲಿ ಮಾದರಿ ಜೀವವೈವಿಧ್ಯ ಸಮಿತಿ ಚಟುವಟಿಕೆಗಳ ಬಗ್ಗೆ ಹಾಗೂ ಜೀವವೈವಿಧ್ಯ ಅಭಿಯಾನದ ಕಾರ್ಯಕ್ರಮದ ಬಗ್ಗೆ ಇ.ಒ ಸಿದ್ದಾಪುರ, ಆರ್.ಎಫ್.ಒ ಸಿದ್ದಾಪುರ, ಪಿ.ಡಿ.ಒ ಹೆರೂರು, ಪಿ.ಡಿ.ಒ ಹೆಗ್ಗರಣಿ, ಪಿ.ಡಿ.ಒ ಕಾನಸೂರು ಇವರುಗಳ ಜೊತೆ ಸಮಾಲೋಚಿಸಿದರು. |
| 24 | 09-07-2021 | ದಿನಾಂಕ: 09-07-2021 ರಂದು ಬೆಳಗ್ಗೆ 10:30 ಘಂಟೆಗೆ ತಾಲ್ಲೂಕು ಪಂಚಾಯತ್ ಶಿರಸಿ ಕಛೇರಿಯಲ್ಲಿ ಇ.ಒ ಅವರ ಜೊತೆ ಮಾದರಿ ಜೀವವೈವಿಧ್ಯ ಸಮಿತಿ ಕಾರ್ಯಗಳು, ಜೀವವೈವಿಧ್ಯ ಅಭಿಯಾನ ಕಾರ್ಯಕ್ರಮದ ಬಗ್ಗೆ ಸಮಾಲೋಚನೆ ಮಾಡಲಾಯಿತು. ಈ ಸಭೆಗೆ ಇ.ಒ ಶಿರಸಿ ಹಾಗೂ ಇ.ಒ ಯಲ್ಲಾಪುರದವರು ಭಾಗವಹಿಸಿದ್ದರು. |
| 25 | 12-07-2021 | ಜೀವವೈವಿಧ್ಯ ಜಾಗೃತಿ ಅಭಿಯಾನದ ಅಂಗವಾಗಿ ಹೇರೂರಿನಲ್ಲಿ ವಿಶೇಷ ಹಸಿರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದಿನಾಂಕ: 12-07-2021ರಂದು ಮಧ್ಯಾಹ್ನ 3:30 ಘಂಟೆಗೆ ಹೇರೂರು ಸಿದ್ಧಿವಿನಾಯಕ ದೇವಸ್ಥಾನ ಪವಿತ್ರವನದಲ್ಲಿ ವೃಕ್ಷಾರೋಪಣದ ಮೂಲಕ ಪೂಜ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀಜಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಸಾಧಕರಿಗೆ ಸನ್ಮಾನ ಮಾಡಿದರು. |

| | | |
|---|---|---|
| 26 | 16-07-2021 | ದಿನಾಂಕ: 16-07-2021ರಂದು ಬೆಳಗ್ಗೆ 10:30ಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ, ಜೀವವೈವಿಧ್ಯ ಸಂರಕ್ಷಣೆ ಮಾಡಿರುವ ಸಾಧಕರಿಗೆ ಸನ್ಮಾನ ಮಾಡಿ, ಜೀವವೈವಿಧ್ಯ ದಾಖಲಾತಿ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು ಧಾರವಾಡ, ಸಿಇಒ ಧಾರವಾಡ, ಸಿಸಿಎಫ್ ಧಾರವಾಡ, ಜಿಲ್ಲಾ ಪಂಚಾಯತ್ ಜೀವವೈವಿಧ್ಯ ನಿರ್ವಹಣಾ ಸಮಿತಿ ಅಧ್ಯಕ್ಷರು, ಸದಸ್ಯರುಗಳನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಡಿಸಿಎಫ್ ಟೆರಿಟೋರಿಯಲ್ ಧಾರವಾಡ, ಡಿಸಿಎಫ್ ಸಾಮಾಜಿಕ ಅರಣ್ಯ ಧಾರವಾಡ, ಜಿಲ್ಲಾ ತೋಟಗಾರಿಕಾಧಿಕಾರಿ, ಜಿಲ್ಲಾ ಕೃಷಿ ಅಧಿಕಾರಿ, ಜಿಲ್ಲಾ ಮಾಲಿನ್ಯ ನಿಯಂತ್ರಣಾಧಿಕಾರಿ, ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ, ಜಿಲ್ಲಾ ಸಣ್ಣ ನೀರಾವರಿ ಅಧಿಕಾರಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಹುಬ್ಬಳ್ಳಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಧಾರವಾಡ, ಇವರುಗಳು ಈ ಸಭೆಗೆ ಹಾಜರಿದ್ದರು. |
| 27 | 19-07-2021 | ದಿನಾಂಕ: 19-7-2021 ಬೆಳಗ್ಗೆ 8-45 ಕ್ಕೆ ಭದ್ರಾವತಿ ನಗರಸಭೆ ವ್ಯಾಪ್ತಿ ಪ್ರದೇಶದಲ್ಲಿ (ಖಾಲಿ ಪ್ರದೇಶ) ವೃಕ್ಷಾರೋಪಣಾ ನಡೆಸಿ ತಾಲ್ಲೂಕು ಮಟ್ಟದ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಅಲ್ಲಿರುವ ಸಂಘ ಸಂಸ್ಥೆಗಳು, ನಗರ ಸಭೆ ಜೀವವೈವಿಧ್ಯ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳು,ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯತ್ ಭದ್ರಾವತಿ, ತಹಸಿಲ್ದಾರ್ ಭದ್ರಾವತಿ ಹಾಗೂ ಸ್ಥಳೀಯ ಶಾಸಕರು, ಸ್ಥಳೀಯ ವಲಯ ಮತ್ತು ಉಪ ವಲಯ ಅರಣ್ಯಾಧಿಕಾರಿಗಳು ಇವರನ್ನು ಆಹ್ವಾನಿಸಿದರು. |
| 28 | 22-07-2021 | ದಿನಾಂಕ: 22/07/2021 ರಂದು ಬೆಳಗ್ಗೆ 9:30 ಘಂಟೆಗೆ ಚಾಮರಾಜನಗರ ಡಿ.ಸಿ.ಎಫ್ ಕಛೇರಿಯಲ್ಲಿ ಡಿ.ಸಿ.ಎಫ್, ಎ.ಸಿ.ಎಫ್, ಡಿ.ಸಿ.ಎಫ್ ಸಾಮಾಜಿಕ ಅರಣ್ಯ ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. ಬೆಳಗ್ಗೆ 10:30ಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿಯಲ್ಲಿ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ, ಜೀವವೈವಿಧ್ಯ ಸಂರಕ್ಷಣೆ ಮಾಡಿರುವ ಸಾಧಕರಿಗೆ ಸನ್ಮಾನ ಮಾಡಿ ಜೀವವೈವಿಧ್ಯ ದಾಖಲಾತಿ ಬಿಡುಗಡೆ ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು ಚಾಮರಾಜನಗರ, ಸಿಇಒ ಚಾಮರಾಜನಗರ, ಸಿಸಿಎಫ್ ಚಾಮರಾಜನಗರ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಚಾಮರಾಜನಗರ, ಚಾಮರಾಜನಗರ ಕಾರ್ಪೋರೇಷನ್ ಕಮೀಷನರ್, ಜಿಲ್ಲಾ ಪಂಚಾಯತ್ ಜೀವವೈವಿಧ್ಯ ನಿರ್ವಹಣಾ ಸಮಿತಿ ಅಧ್ಯಕ್ಷರು, ಸದಸ್ಯರುಗಳನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಈ ಸಂದರ್ಭದಲ್ಲಿ ಡಿಸಿಎಫ್ ಟೆರಿಟೋರಿಯಲ್ ಚಾಮರಾಜನಗರ, ಡಿಸಿಎಫ್ ಸಾಮಾಜಿಕ ಅರಣ್ಯ ಚಾಮರಾಜನಗರ, ಜಿಲ್ಲಾ ತೋಟಗಾರಿಕಾಧಿಕಾರಿ, ಜಿಲ್ಲಾ ಕೃಷಿ ಅಧಿಕಾರಿ, ಜಿಲ್ಲಾ ಮಾಲಿನ್ಯ ನಿಯಂತ್ರಣಾಧಿಕಾರಿ, ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ, ಜಿಲ್ಲಾ ಸಣ್ಣ ನೀರಾವರಿ ಅಧಿಕಾರಿ, ತಾಲ್ಲೂಕು ಪಂಚಾಯತ್ |

| | | |
|---|---|---|
| | | ಕಾರ್ಯನಿರ್ವಹಣಾಧಿಕಾರಿಗಳು ಚಾಮರಾಜನಗರ, ಇವರುಗಳನ್ನು ಆಹ್ವಾನಿಸಲಾಗಿತ್ತು. ನಂತರ ಮಧ್ಯಾಹ್ನ 3:30 ಘಂಟೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮೈಸೂರು ಕಛೇರಿಗೆ ಭೇಟಿ ನೀಡಿದರು. |
| 29 | 25-07-2021 | ದಿನಾಂಕ: 25/07/2021 ರಂದು ಬೆಳಗ್ಗೆ 8.00 ಘಂಟೆಗೆ ರಾಯಚೂರು ಅರಣ್ಯ ವಿಶ್ರಾಂತಿ ಗೃಹದಲ್ಲಿ ಡಿಸಿಎಫ್ ಟೆರಿಟೋರಿಯಲ್, ಡಿ.ಸಿ.ಎಫ್ ಸಾಮಾಜಿಕ ಅರಣ್ಯ ಇವರುಗಳ ಜೊತೆ ಸಮಾಲೋಚನೆ ನಡೆಸಿ, 11 ಘಂಟೆಗೆ ಹೊರಟು ಮಂತ್ರಾಲಯ ಮಠಕ್ಕೆ ಭೇಟಿ ನೀಡಿ ವೃಕ್ಷಾರೋಪಣಾ ಮಾಡಿದರು. |
| 30 | 26-07-2021 | ದಿನಾಂಕ: 26/07/2021 ರಂದು ಬೆಳಗ್ಗೆ 10:30ಕ್ಕೆ ರಾಯಚೂರು ಜಿಲ್ಲೆಯ ಸಿ.ಇ.ಓ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ ನೀಡಿ, ಜೀವವೈವಿಧ್ಯ ಸಂರಕ್ಷಣೆ ಮಾಡಿರುವ ಸಾಧಕರಿಗೆ ಸನ್ಮಾನ ಮಾಡಿ, ಜೀವವೈವಿಧ್ಯ ದಾಖಲಾತಿ ಬಿಡುಗಡೆ ಮಾಡಲಾಯಿತು. ಸಂಜೆ 4.00 ಘಂಟೆಗೆ ದೇವದುರ್ಗ ತಾಲ್ಲೂಕು ಪಂಚಾಯತ್ ಕಛೇರಿ ತಲುಪಿ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ ನೀಡಿದರು. |
| 31 | 27-07-2021 | ದಿನಾಂಕ: 27/07/2021 ರಂದು ಬೆಳಗ್ಗೆ 9:30 ಘಂಟೆಗೆ ಯಾದಗಿರಿ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ಡಿಸಿಎಫ್ ಟೆರಿಟೋರಿಯಲ್, ಡಿ.ಸಿ.ಎಫ್ ಸಾಮಾಜಿಕ ಅರಣ್ಯ, ಎಸಿಎಫ್, ಆರ್.ಎಫ್.ಓ ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. 10:30ಕ್ಕೆ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜೀವವೈವಿಧ್ಯ ಅಭಿಯಾನಕ್ಕೆ ಚಾಲನೆ ನೀಡಿ, ಜೀವವೈವಿಧ್ಯ ಸಂರಕ್ಷಣೆ ಮಾಡಿರುವ ಸಾಧಕರಿಗೆ ಸನ್ಮಾನ ಮಾಡಿ, ಜೀವವೈವಿಧ್ಯ ದಾಖಲಾತಿ ಬಿಡುಗಡೆ ಮಾಡಲಾಯಿತು. 2:30ಕ್ಕೆ ಭೀಮರಾಯನಗುಡಿ ತಲುಪಿ ರೈತರ ಜೊತೆ ಕೃಷಿ ವಿಜ್ಞಾನ ಕಾಲೇಜಿನಲ್ಲಿ (ಶಾಹಪುರ ಹತ್ತಿರ) ವಿಶೇಷ ಸಮಾಲೋಚನಾ ಸಭೆ, ವೃಕ್ಷಾರೋಪಣಾ ಮಾಡಿದರು. |
| 32 | 03-08-2021 | ದಿನಾಂಕ: 03-08-2021 ರಂದು 10:30ಕ್ಕೆ ಉತ್ತರ ಕನ್ನಡ ಜಿಲ್ಲೆಯ ಕಳಚೆ ಗ್ರಾಮದ ಭೂಕುಸಿತ ಪ್ರದೇಶಕ್ಕೆ ಭೇಟಿ ನೀಡಲಾಯಿತು. ಮಧ್ಯಾಹ್ನ 3.00 ಘಂಟೆಗೆ ಯಲ್ಲಾಪುರ ತಾಲ್ಲೂಕು ಪಂಚಾಯತ್ ಕಛೇರಿಗೆ ಆಗಮಿಸಿ ಜೀವವೈವಿಧ್ಯ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಳ್ಳಲಾಯಿತು. ಶ್ರೀ ರಾಮಾ ಮರಾಠೆ ಜೇನು ಸಾಕಾಣಿಕೆ ಮತ್ತು ಸಂಗ್ರಹಕಾರ ಇವರನ್ನು ಅಭಿನಂದಿಸಿದರು. |
| 33 | 23-08-2021 | ದಿನಾಂಕ: 23/08/2021 ರಂದು ಮಧ್ಯಾಹ್ನ 3.00 ಘಂಟೆಗೆ ಜೀವವೈವಿಧ್ಯ ಜಾಗೃತಿ ಅಭಿಯಾನದ ಅಂಗವಾಗಿ ಹೊಸನಗರ ತಾಲ್ಲೂಕು ಬಾಣಿಗ ಗ್ರಾಮದ ಪವಿತ್ರ ವನಕ್ಕೆ ಭೇಟಿ ನೀಡಿ ವೃಕ್ಷಾರೋಪಣಾದಲ್ಲಿ ಪಾಲ್ಗೊಳ್ಳಲಾಯಿತು. ಗ್ರಾಮ ಅರಣ್ಯ ಸಮಿತಿ ಬಾಣಿಗ, ಮಾರುತಿಪುರ ಗ್ರಾಮ ಪಂಚಾಯತ್ ಜೀವವೈವಿಧ್ಯ ಸಮಿತಿ ಹಾಗೂ ಹರಿದ್ರಾವತಿ ಗ್ರಾಮ |

| | | |
|---|---|---|
| | | ಪಂಚಾಯತ್ ಜೀವವೈವಿಧ್ಯ ಸಮಿತಿ ಇವರು ಪಾಲ್ಗೊಂಡಿದ್ದರು. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಗಳು ಹೊಸನಗರ, ಎ.ಸಿ.ಎಫ್ ಟೆರಿಟೋರಿಯಲ್ ಹೊಸನಗರ, ಆರ್.ಎಫ್.ಒ ಟೆರಿಟೋರಿಯಲ್ ಮತ್ತು ಸಾಮಾಜಿಕ ಅರಣ್ಯ ಹೊಸನಗರ ಇವರುಗಳು ಹಾಜರಾಗಿದ್ದರು. 4:30ಕ್ಕೆ ಸಾರ ಸಂಸ್ಥೆಯವರ ಜೊತೆಗೆ ಸಾರ ಸಂಸ್ಥೆಯಡಿಯ ಮುತ್ತಾಲದ ವೃಕ್ಷಾರೋಪಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. |
| 34 | 27-08-2021 | ದಿನಾಂಕ: 27/08/2021 ರಂದು ಬೆಳಗ್ಗೆ 11.00 ಘಂಟೆಗೆ ಅಸಿಸ್ಟೆಂಟ್ ಕಮೀಷನರ್ ಶಿರಸಿ ಕಛೇರಿಯಲ್ಲಿ ಅಸಿಸ್ಟೆಂಟ್ ಕಮೀಷನರ್ ಶಿರಸಿ, ತಹಸೀಲ್ದಾರ್ ಶಿರಸಿ, ಜಿಲ್ಲಾ ಪಂಚಾಯತ್ ಇಂಜಿನಿಯರ್ ಶ್ರೀ ಗಾಂವ್ಕರ್ ಇವರುಗಳ ಜೊತೆಗೆ ಪ್ರಕೃತಿ ವಿಕೋಪ ಪರಿಹಾರ ಕುರಿತು ಸಮಾಲೋಚನೆ ನಡೆಸಿದರು. |
| 35 | 02-09-2021 | ದಿನಾಂಕ:02/09/2021 ರಂದು ಮಧ್ಯಾಹ್ನ 12.00 ಘಂಟೆಗೆ ಶಿವಮೊಗ್ಗ ಸಿ.ಸಿ.ಎಫ್ ಕಛೇರಿಯಲ್ಲಿ ಸಿ.ಸಿ.ಎಫ್ ಅವರ ಜೊತೆ ಜೀವವೈವಿಧ್ಯಅರಣ್ಯ ಪರಿಸರ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. ಮಧ್ಯಾಹ್ನ 3.00ಘಂಟೆಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಯಿತು. 4.00 ಘಂಟೆಗೆ ಶಿವಮೊಗ್ಗ ಮಹಾನಗರ ಪಾಲಿಕೆ ಕಛೇರಿಗೆ ಭೇಟಿ ನೀಡಿ ಮಹಾನಗರ ಪಾಲಿಕೆ ಕಮೀಷನರ್ ಅವರ ಜೊತೆ ಸಮಾಲೋಚನೆ ನಡೆಸಿ 5.00 ಘಂಟೆಗೆ ಸಂಘ ಸಂಸ್ಥೆಗಳ ಜೊತೆ ಕೆರೆ ಪುನಶ್ಚೇತನ ಸ್ಥಳಕ್ಕೆ ಭೇಟಿ ನೀಡಿದರು. |
| 36 | 04-09-2021 | ದಿನಾಂಕ: 04-09-2021 ರಂದು ಮಧ್ಯಾಹ್ನ 3:30 ಘಂಟೆಗೆ ಶಿರಸಿ ಪಟ್ಟಣದ ಮರಾಠಿ ಕೊಪ್ಪಾದಲ್ಲಿರುವ ಅಜಿತ ಮನೋಚೇತನಾ ಸಂಸ್ಥೆಗೆ ಭೇಟಿ ನೀಡಿ ಮಲೆನಾಡಿನ ಸುಸ್ಥಿರ ಇಂಧನಅಭಿವೃದ್ಧಿಕುರಿತು ವಿಶೇಷ ಸಮಾಲೊಚನಾ ಸಭೆಯಲ್ಲಿ ಪಾಲ್ಗೊಳ್ಳಲಾಯಿತು. ಈ ಸಭೆಗೆ **ಶಿರಸಿ ತಾಲ್ಲೂಕು ಪಂಚಾಯತ್ ಇ.ಒ,** ಶಿರಸಿ ನಗರ ಸಭೆ ಕಮೀಷನರ್, ಶಿರಸಿಯ ಹೆಸ್ಕಾಂ ಮುಖ್ಯ ಅಧಿಕಾರಿಗಳು, ಶಿರಸಿ ಎ.ಪಿ.ಎಂ.ಸಿ ಮುಖ್ಯ ಅಧಿಕಾರಿಗಳು, ಎ.ಸಿ.ಎಫ್. ಶಿರಸಿ (ಟೆರಿಟೋರಿಯಲ್) ಕೆ.ಡಿ.ಸಿ.ಸಿ ಬ್ಯಾಂಕ್ ಎಂಡಿ, ಶಿರಸಿ ಅರ್ಬನ್ ಬ್ಯಾಂಕ್ ವ್ಯವಸ್ಥಾಪಕರು ಆಗಮಿಸಿದ್ದರು. |
| 37 | 06-09-2021 | ದಿನಾಂಕ:06/09/2021 ರಂದು ಬೆಳಗ್ಗೆ 10:30ಕ್ಕೆ ಸೊರಬ ಎ.ಸಿ.ಎಫ್ ಅರಣ್ಯ ಇಲಾಖೆಯಲ್ಲಿ ಎ.ಸಿ.ಎಫ್. ಸೊರಬ, ಆರ್.ಎಫ್.ಒ ಸೊರಬ ಇವರುಗಳ ಜೊತೆ ಸಮಾಲೋಚನೆ ನಡೆಸಿ, 11:15ಕ್ಕೆ ಸೊರಬ ತಾಲ್ಲೂಕು ಪಂಚಾಯತ್‌ಗೆ ಕಛೇರಿಯಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಸೊರಬ, ಆರ್.ಎಫ್.ಒ (ಸಾಮಾಜಿಕ ಅರಣ್ಯ)ಸೊರಬ, ಆರ್.ಎಫ್.ಒ (ಪ್ರಾದೇಶಿಕ ವಿಭಾಗ) ಸೊರಬ, ತಾಲ್ಲೂಕು ಕೃಷಿ ಅಧಿಕಾರಿಗಳು, ತಾಲ್ಲೂಕು ತೋಟಗಾರಿಕಾಧಿಕಾರಿಗಳು ಇವರುಗಳ ಜೊತೆ ಸಮಾಲೋಚನೆ ನಡೆಸಿದರು. |

| | | |
|---|---|---|
| 38 | 07-09-2021 | ದಿನಾಂಕ:07/09/2021 ರಂದು ಬೆಳಗ್ಗೆ 11:15 ಕ್ಕೆ ತಾಲ್ಲೂಕು ಪಂಚಾಯತ್ ಮುಂಡಗೋಡಿನಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಮುಂಡಗೋಡು, ತಹಸೀಲ್ದಾರ್ ಮುಂಡಗೋಡು, ಎ.ಸಿ.ಎಫ್ ಟೆರಿಟೋರಿಯಲ್, ಆರ್.ಎಫ್.ಒ (ಸಾಮಾಜಿಕ ಅರಣ್ಯ), ಆರ್.ಎಫ್.ಒ (ಪ್ರಾದೇಶಿಕ ವಿಭಾಗ), ಕಿರು ನೀರಾವರಿ ಅಧಿಕಾರಿಗಳು, ತಾಲ್ಲೂಕು ಕೃಷಿ ಅಧಿಕಾರಿಗಳು, ತಾಲ್ಲೂಕು ತೋಟಗಾರಿಕಾಧಿಕಾರಿಗಳು, ತಾಲ್ಲೂಕು ಪಶು ಸಂಗೋಪನಾ ಇಲಾಖಾ ಅಧಿಕಾರಿಗಳು, ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿಗಳು ಇವರುಗಳ ಜೊತೆ ಪರಿಸರ, ಅರಣ್ಯ, ಜೀವವೈವಿಧ್ಯ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. ಮುಂಡಗೂಡು ತಾಲ್ಲೂಕು ಪಂಚಾಯತ್‌ನ ಎಲ್ಲಾ ಪಿ.ಡಿ.ಒಗಳನ್ನು, ಮಾನ್ಯ ಶಾಸಕರನ್ನು, ಶ್ರೀ ವಿ.ಸಿ ಪಾಟೀಲ್‌ರನ್ನು ಆಹ್ವಾನಿಸಿದರು. |
| 39 | 13-09-2021 | ದೂರದರ್ಶನ-ಚಂದನದವರ ಮೂಲಕ ಅರಣ್ಯ ಕರಾವಳಿ ಜೀವವೈವಿಧ್ಯ ಪರಿಸರರಕ್ಷಣೆ ಕುರಿತು ಯಶೋಗಾಥೆ ಚಿತ್ರೀಕರಣ, ಸಂದರ್ಶನಕ್ಕಾಗಿ ದಿನಾಂಕ: 13-09-2021 ರಂದು ಬೆಳಗ್ಗೆ 10 ಘಂಟೆಗೆ ಕುಮಟಾ ಎ.ಸಿ.ಎಫ್, ಅರಣ್ಯ ಇಲಾಖೆ ಕಛೇರಿಗೆಯಲ್ಲಿ ದೂರದರ್ಶನದ ವಿಶೇಷ ಜಿಲ್ಲಾ ವರದಿಗಾರರು ಸಂದರ್ಶನದಲ್ಲಿ ಕರಾವಳಿ ಹಸಿರು ಕವಚ ವಿಷಯ ಚಿತ್ರೀಕರಣಿಸಲಾಯಿತು. ಬೀಚ್‌ಗೆ ಸಿಕ್ಕ ಅಂತರರಾಷ್ಟ್ರೀಯ ಮಾನ್ಯತೆ, ಆಮೆ ಸಂಕುಲ ಅಭಿವೃದ್ಧಿ ಕಾಂಡ್ಲಾ ಮಹತ್ವ, ಅಳಿವೆ ಮಹತ್ವ ಕುರಿತು ಚಿತ್ರೀಕರಣ ಮಾಡಲಾಯಿತು. ಈ ಬಗ್ಗೆ ಡಾ||. ಪ್ರಕಾಶ್ ಮೇಸ್ತ ಹಾಗೂ ಡಿ.ಸಿ.ಎಫ್ ಅಥವಾ ಎ.ಸಿ.ಎಫ್, ಡಾ||. ಸುಭಾಶ್‌ಚಂದ್ರನ್, ಓರ್ವ ಮೀನುಗಾರರು ಓರ್ವ ರೈತರ ಜೊತೆ (ಗಜನಿ ಭತ್ತ) ಸಂದರ್ಶನ ಮಾಡಿದರು. |
| 40 | 24-09-2021 | ದಿನಾಂಕ: 24-09-2021 ರಂದು ಬೆಳಗ್ಗೆ 10:30ಕ್ಕೆ ಸಾಗರ ನಗರ ಸಭೆ ಕಛೇರಿಯಲ್ಲಿ ನಗರ ಸಭಾ ಕಮೀಷನರ್ ಅವರ ಜೊತೆಗೆ ಜೀವವೈವಿಧ್ಯ ಕಾರ್ಯಚಟುವಟಿಕೆ ಬಗ್ಗೆ ಸಮಾಲೋಚಿಸಿದರು. |
| 41 | 01-10-2021 | ದಿನಾಂಕ:01/10/2021 ರಂದು 11:15ಕ್ಕೆ ತಾಲ್ಲೂಕು ಪಂಚಾಯತ್ ಮುಂಡಗೋಡಿನಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಮುಂಡಗೋಡು, ತಹಸೀಲ್ದಾರ್ ಮುಂಡಗೋಡು, ಎ.ಸಿ.ಎಫ್ ಟೆರಿಟೋರಿಯಲ್, ಆರ್.ಎಫ್.ಒ (ಸಾಮಾಜಿಕಅರಣ್ಯ), ಆರ್.ಎಫ್.ಒ (ಪ್ರಾದೇಶಿಕ ವಿಭಾಗ), ಕಿರು ನೀರಾವರಿ ಅಧಿಕಾರಿಗಳು, ತಾಲ್ಲೂಕು ಕೃಷಿ ಅಧಿಕಾರಿಗಳು, ತಾಲ್ಲೂಕು ತೋಟಗಾರಿಕಾಧಿಕಾರಿಗಳು, ತಾಲ್ಲೂಕು ಪಶು ಸಂಗೋಪನಾ ಇಲಾಕೆ ಅಧಿಕಾರಿಗಳು, ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿಗಳು ಇವರುಗಳ ಜೊತೆ ಪರಿಸರ ಅರಣ್ಯ ಜೀವವೈವಿಧ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಲಾಯಿತು. ಮುಂಡಗೂಡು ತಾಲ್ಲೂಕು ಪಂಚಾಯತ್‌ನ ಎಲ್ಲ ಪಿ.ಡಿ.ಒಗಳನ್ನು ಆಹ್ವಾನಿಸಿದ್ದರು. |
| 42 | 23-10-2021 | ದಿನಾಂಕ: 23-10-2021 ರಂದು ಸಾಗರದಲ್ಲಿಜೀವವೈವಿಧ್ಯ ಮಂಡಳಿ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಅವರು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶ್ರೀ ಕೆ. ವೆಂಕಟೇಶ್ ಅವರ ಜೊತೆ ಸಮಾಲೋಚನೆ ಸಭೆ ಏರ್ಪಡಿಸಿದ್ದರು. |

| | | |
|---|---|---|
| 43 | 26-10-2021 | ದಿನಾಂಕ: 26-10-2021 ರಂದು ಬೆಳಗ್ಗೆ 10:30ಕ್ಕೆ ಯಲ್ಲಾಪುರ ತಾಲ್ಲೂಕು ಪಂಚಾಯತ್‌ಗೆ ಭೇಟಿ ನೀಡಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಮಾದರಿ ಜೀವವೈವಿಧ್ಯ ನಿರ್ವಹಣಾ ಸಮಿತಿ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಯಲ್ಲಾಪುರ ವಲಯ ಅರಣ್ಯಾಧಿಕಾರಿಗಳು (ಪ್ರಾದೇಶಿಕ) ವಲಯ ಅರಣ್ಯಾಧಿಕಾರಿಗಳು (ಸಾಮಾಜಿಕ ಅರಣ್ಯ), ತಾಲ್ಲೂಕು ತೋಟಗಾರಿಕಾಧಿಕಾರಿಗಳು, ತಾಲ್ಲುಕು ಶಿಕ್ಷಣಾಧಿಕಾರಿಗಳು (ಬಿ.ಇ.ಒ) ಇವರುಗಳು ಪಾಲ್ಗೊಂಡಿದ್ದರು. |
| 44 | 28-10-2021 | ದಿನಾಂಕ: 28-10-2021 ರಂದು ಬೆಳಗ್ಗೆ 10:30 ಘಂಟೆಗೆ ಭಟ್ಕಳದ ಟ್ರೀ ಪಾರ್ಕ್‌ನಲ್ಲಿ ಸಮಾಲೋಚನಾ ಸಭೆ ಕಾರ್ಯಾಗಾರ ಏರ್ಪಡಿಸಲಾಗಿದೆ. ಕರಾವಳಿ 3 ಜಿಲ್ಲೆಗಳ ಟೆರಿಟೋರಿಯಲ್ ಡಿ.ಸಿ.ಎಫ್‌ಗಳು, ಸಿ.ಆರ್.ಜೆಡ್ ಡಿ.ಸಿ.ಎಫ್‌ಗಳು ಹಾಗೂ ಡಾ|| ರಾಮಚಂದ್ರ ಭಟ್ (ಕಾಸರಕೋಡು ಹೊನ್ನಾವರ), ಡಾ||. ಸುಭಾಶ್‌ಚಂದ್ರನ್ (ಕುಮಟಾ), ಡಾ||. ಕೇಶವ್ ಕೊರ್ಸೆ (ಶಿರಸಿ), ಡಾ||. ಮಹಾಬಲೇಶ್ವರ ಹೆಗಡೆ (ಕಾರವಾರ), ಡಾ||. ಶಿವಕುಮಾರ ಹರಗಿ (ಕಾರವಾರ), ಡಾ||. ಪ್ರಕಾಶ್ ಮೇಸ್ತ (ಹೊನ್ನಾವರ) ಡಾ||. ವಿ.ಎನ್. ನಾಯಕ್ (ಅಂಕೋಲಾ) ಇವರನ್ನು ಆಹ್ವಾನಿಸಲಾಗಿತ್ತು.<br>ಕಾರ್ಯಾಗಾರದ ವಿವರ: ಚಂಡಮಾರುತ ಸಮುದ್ರ ಕೊರೆತ, ಮತ್ಸ್ಯಕ್ಷಾಮ ಇತ್ಯಾದಿ ಗಂಭೀರವಾದ ಕರಾವಳಿಯ ಪರಿಸರ, ಅರಣ್ಯ, ಜೀವವೈವಿಧ್ಯ ಸಮಸ್ಯೆಗಳಿಗೆ ದೀರ್ಘಕಾಲಿನ ಪರಿಹಾರ ಕಂಡುಕೊಳ್ಳುವ ಕುರಿತು, ಕರಾವಳಿ ಜಿಲ್ಲೆಗಳ ಅರಣ್ಯ ಪರಿಸರ ಇಲಾಖೆ ಅಧಿಕಾರಿಗಳು ತಜ್ಞರ ಜೊತೆ ಸಮಾಲೋಚನಾ ಕಾರ್ಯಾಗಾರ. |
| 45 | 02-11-2021 | ದಿನಾಂಕ: 02-11-2021 ರಂದು ಬೆಳಗ್ಗೆ 10:30 ಘಂಟೆಗೆ ಶಿರಸಿಯ ಮರಾಠಿಕೊಪ್ಪ ಅಜಿತ ಮನೋಚೇತನ ವಿಕಾಸ ವಿಶೇಷ ಮಕ್ಕಳ ಶಾಲಾ ಅವಾರದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿಶೇಷ ಮಕ್ಕಳ ಶಾಲೆಗಳ ಶಿಕ್ಷಕರು, ಪಾಲಕರು, ಸಂಸ್ಥೆಗಳ ಸಮಾವೇಶ, ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಶ್ರೀ ಅನಂತ ಹೆಗಡೆ ಅಶೀಸರ, ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿ ಈ ಕಾರ್ಯಾಗಾರದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಕೋಂಡಿದ್ದರು. |
| 46 | 11-11-2021 | 11-11-2021ರ ಬೆಳಗ್ಗೆ 9:30ಕ್ಕೆ ಕಾಸರಕೋಡನಲ್ಲಿ ಕಾಂಡ್ಲಾ ಸಂರಕ್ಷಣೆ-ಸಂವರ್ಧನೆ ಕುರಿತ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಲಾಯಿತು. ಮಧ್ಯಾಹ್ನ 4 ಘಂಟೆಗೆ ತಾಲ್ಲೂಕು ಪಂಚಾಯತ್ ಕಛೇರಿ ಸಿದ್ದಾಪುರ ಇಲ್ಲಿಗೆ ಭೇಟಿ ನೀಡಿ, ಕಾರ್ಯನಿರ್ವಹಣಾಧಿಕಾರಿಗಳು ಸಿದ್ದಾಪುರ, ವಲಯ ಅರಣ್ಯಾಧಿಕಾರಿಗಳು ಸಿದ್ದಾಪುರ (ಪ್ರಾದೇಶಿಕ), ವಲಯ ಅರಣ್ಯಾಧಿಕಾರಿಗಳು ಸಿದ್ದಾಪುರ (ಸಾಮಾಜಿಕಅರಣ್ಯ), ತಾಲ್ಲೂಕು ತೋಟಗಾರಿಕಾ ಅಧಿಕಾರಿ, ಬಿ.ಇ.ಒ ಸಿದ್ದಾಪುರ ಇವರ ಜೊತೆ ತಾಲ್ಲೂಕು ಜೀವವೈವಿಧ್ಯ ಸನ್ಮಾನ, ಘೋಷಣಾ ಫಲಕಗಳು, ಹಸಿರು ಶಾಲೆ ಘೋಷಣೆ, ಮಹಿಳಾ ಸ್ವಾತಂತ್ರ ವನ, ಕತ್ತಲೆಕಾನು, ಆಯುರ್ವೇದ ಪುನಶ್ಚೇತನ ಕಾಲೇಜಿನಲ್ಲಿ ಔಷಧೀ ಸಸ್ಯ ನರ್ಸರಿ/ಗಿಡ ಬೆಳೆಸುವುದು ಇತ್ಯಾದಿ ಮಾದರಿ ಜೀವವೈವಿಧ್ಯ ಸಮಿತಿ ಕಾರ್ಯಗಳ ಬಗ್ಗೆ ಸಮಾಲೋಚಿಸಿದರು. |

## 5. ಜೀವವೈವಿಧ್ಯ ನಿರ್ವಹಣಾ ಸಮಿತಿಗಳು:

ಜೈವಿಕವೈವಿಧ್ಯ ಅಧಿನಿಯಮ 2002ರ ಪರಿಚ್ಛೇದ (41) ಹಾಗೂ ಕರ್ನಾಟಕ ಜೈವಿಕವೈವಿಧ್ಯ ನಿಯಮ 2005, ನಿಯಮ (21)ರನ್ವಯ, ಪ್ರತಿಯೊಂದು ಸ್ಥಳೀಯ ಸಂಸ್ಥೆಯು ತನ್ನ ಸುತ್ತ ಮುತ್ತಲಿನ ಪ್ರದೇಶದ, ನಾಟಿ ಕೃಷಿತಳ ಪ್ರಭೇದಗಳು ಪಳಗಿಸಿದ ಪ್ರಾಣಿಗಳು ಸೂಕ್ಷ್ಮ ಜೀವಿಗಳು ಮತ್ತು ಜೈವಿಕವೈವಿಧ್ಯತೆಗೆ ಸಂಬಂಧಿಸಿದ ಜ್ಞಾನ ಕಾಲಾನುಕ್ರಮದ ಪರಿಚಯವೂ ಸೇರಿದಂತೆ ಜೀವವೈವಿಧ್ಯದ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ದಾಖಲಾತಿಯ ಉದ್ದೇಶಕ್ಕಾಗಿ ಸದರಿ ಪ್ರದೇಶದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸಬೇಕಾಗಿರುತ್ತದೆ.

ಜೀವವೈವಿಧ್ಯ ನಿರ್ವಹಣಾ ಸಮಿತಿಯು ಅಧ್ಯಕ್ಷರು ಸೇರಿದಂತೆ ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತ ರಾದ ಆರು ಜನರಿಗಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರನ್ನು ಹೊಂದಿರುತ್ತದೆ. ಈ ಸಮಿತಿಯಲ್ಲಿ ಕನಿಷ್ಠ ಪಕ್ಷ ಒಬ್ಬರು ಮಹಿಳಾ ಸದಸ್ಯರು ಹಾಗೂ ಶೇಖಡ 18ಕ್ಕಿಂತ ಕಡಿಮೆ ಇಲ್ಲದಂತೆ ಒಬ್ಬರು ಪರಿಶಿಷ್ಠ ಜಾತಿ ಅಥವಾ ಪಂಗಡದ ಸದಸ್ಯರಿರಬೇಕಾಗುತ್ತದೆ.

### 5.1 ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಚಟುವಟಿಕೆಗಳು

ಜೀವವೈವಿಧ್ಯ ನಿರ್ವಹಣಾ ಸಮಿತಿಯ ಮುಖ್ಯ ಕಾರ್ಯಗಳೆಂದರೆ, ಸ್ಥಳೀಯ ಜನರೊಡನೆ ಸಮಾಲೋಚಿಸಿ ಜನತಾ ಜೀವವೈವಿಧ್ಯ ದಾಖಲಾತಿಯನ್ನು ಸಿದ್ದಪಡಿಸುವುದು ಈ ದಾಖಲಾತಿಯು ಸ್ಥಳೀಯ ಜೈವಿಕ ಸಂಪನ್ಮೂಲಗಳ ಲಭ್ಯತೆ, ಅವುಗಳ ಔಷಧೀಯ ಅಥವಾ ಯಾವುದೇ ಇತರ ಬಳಕೆ ಅಥವಾ ಅವುಗಳ ಬಗೆಗಿನ ಯಾವುದೇ ಇತರ ಸಾಂಪ್ರದಾಯಿಕ ಜ್ಞಾನ ಇವುಗಳ ಸಮಗ್ರ ಮಾಹಿತಿಯನ್ನು ಹೊಂದಿರುತ್ತದೆ.

### 5.2 ರಚನೆಗೊಂಡ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಪ್ರಗತಿಯ ವಿವರ:

| ಪಂಚಾಯಿತಿ | ಒಟ್ಟು ಪಂಚಾಯಿತಿಗಳ ಸಂಖ್ಯೆ | ರಚನೆಗೊಂಡ ಬಿ.ಎಂ.ಸಿಗಳ ಸಂಖ್ಯೆ |
|---|---|---|
| ಗ್ರಾಮ ಪಂಚಾಯಿತಿ | 6012 | 6012 |
| ತಾಲ್ಲೂಕು ಪಂಚಾಯಿತಿ | 226 | 226 |
| ಜಿಲ್ಲಾ ಪಂಚಾಯಿತಿ | 30 | 30 |
| ನಗರ ಸ್ಥಳೀಯ ಸಂಸ್ಥೆಗಳು | 286 | 286 |
| **ಒಟ್ಟು** | **6554** | **6554** |

**ಶೇಕಡ 100%ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.**

## 6. ಜನತಾ ಜೀವವೈವಿಧ್ಯ ದಾಖಲಾತಿ:

ಜೈವಿಕವೈವಿಧ್ಯ ಅಧಿನಿಯಮ 2002ರ ನಿಯಮ 22ರಂತೆ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರ ಹಾಗೂ ರಾಜ್ಯ ಜೀವವೈವಿಧ್ಯ ಮಂಡಳಿಯ ತಾಂತ್ರಿಕ ಸಲಹಾ ಗುಂಪುಗಳ ಮಾರ್ಗದರ್ಶನದೊಂದಿಗೆ ಹಾಗೂ ಸ್ಥಳೀಯ ಜನರ ಸಮಾಲೋಚನೆಯೊಂದಿಗೆ ತಯಾರಿಸುವುದು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖ್ಯ ಚಟುವಟಿಕೆ. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಮುಖ್ಯ ಉದ್ದೇಶವು ಸ್ಥಳೀಯ ಜೀವವೈವಿಧ್ಯದ ಮತ್ತು ಸ್ಥಳೀಯ ಸಮುದಾಯದ ಸಾಂಪ್ರದಾಯಿಕ ಜ್ಞಾನ ಹಾಗೂ ಸಾಂಪ್ರದಾಯಿಕ ಬಳಕೆಗಳ ಸಂರಕ್ಷಣೆ ಕುರಿತು ವರದಿ ತಯಾರಿಸುವುದು.

**6.1: ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಹಂತಗಳು:**

1. ಜೀವವೈವಿಧ್ಯ ನಿರ್ವಹಣಾ ಸಮಿತಿಯ ರಚನೆ.
2. ಸಾರ್ವಜನಿಕರಿಗೆ ಅಧ್ಯಯನದ ಸಮೀಕ್ಷೆ ಹಾಗೂ ಅಗತ್ಯ ನಿರ್ವಹಣೆ ಬಗ್ಗೆ ಅರಿವು ಮೂಡಿಸುವುದು,
3. ಜೈವಿಕ ಸಂಪನ್ಮೂಲಗಳ ಗುರುತಿಸುವಿಕೆ, ಮಾಹಿತಿ ಸಂಗ್ರಹಣೆ ಹಾಗೂ ಸಾಂಪ್ರದಾಯಿಕ ಜ್ಞಾನದ ಬಗ್ಗೆ ಸದಸ್ಯರಿಗೆ ಅರಿವು ಮೂಡಿಸುವುದು.
4. ಮಾಹಿತಿ ಸಂಗ್ರಹಣೆ: ಮಾಹಿತಿ ಸಂಗ್ರಹಣೆಯು ಸಂಬಂಧಪಟ್ಟ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಾಹಿತ್ಯದ ವಿಮರ್ಶೆ ಗ್ರಾಮೀಣ ಸಹಭಾಗಿತ್ವ, ಕೌಟುಂಬಿಕ ಸಮೀಕ್ಷೆ, ಗ್ರಾಮ ಮುಖಂಡರು ಹಾಗೂ ತಜ್ಞರೊಂದಿಗೆ ವೈಯಕ್ತಿಕ ಸಮಾಲೋಚನೆ, ಕುಟುಂಬದ ಮುಖ್ಯಸ್ಥರು, ಪಂಚಾಯತ್ ರಾಜ್ ಸಂಸ್ಥೆಯ ಮುಖ್ಯಸ್ಥರು ಹಾಗೂ ಸರ್ಕಾರೇತರ ಸಂಸ್ಥೆಗಳ ಸಂದರ್ಶನ ಹಾಗೂ ನೇರ ಕ್ಷೇತ್ರ ವಿಮರ್ಶೆ.
5. ತಾಂತ್ರಿಕ ಸಲಹಾ ಸಮಿತಿಗಳು ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಸಮಾಲೋಚಿಸಿ ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆ ಹಾಗೂ ಮೌಲ್ಯಮಾಪನ.
6. ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ.

**6.2 ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿಯ ವಿವರ**

| ಪಂಚಾಯಿತಿಗಳು | ಒಟ್ಟು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ | ಒಟ್ಟು ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ |
|---|---|---|
| ಗ್ರಾಮ ಪಂಚಾಯಿತಿ | 6012 | 6012 |
| ತಾಲ್ಲೂಕು ಪಂಚಾಯಿತಿ | 226 | 226 |
| ಜಿಲ್ಲಾ ಪಂಚಾಯಿತಿ | 30 | 30 |
| ನಗರ ಸ್ಥಳೀಯ ಸಂಸ್ಥೆಗಳು | 286 | 286 |
| **ಒಟ್ಟು** | **6554** | **6554** |

**ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯಲ್ಲಿ ಶೇಕಡ 100% ರಷ್ಟು ಪ್ರಗತಿಯನ್ನು ಸಾಧಿಸಿದೆ.**

**7. ಜೀವವೈವಿಧ್ಯ ತರಬೇತಿ ಕಾರ್ಯಕ್ರಮ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ವತಿಯಿಂದ ರಾಜ್ಯದ ವಿವಿಧ ಸ್ಥಳಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ನಿಯತಕಾಲಿಕವಾಗಿ ಜೀವವೈವಿಧ್ಯತಾ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಈ ತರಬೇತಿಯಲ್ಲಿ ಜೈವಿಕವೈವಿಧ್ಯ ಅಧಿನಿಯಮ 2002, ಕಾಯಿದೆಗಳ ನಿಬಂಧನೆಗಳು, ಜೀವವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ, ಸಾಂಪ್ರದಾಯಿಕ ಜ್ಞಾನ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ಸಮಿತಿಗಳ ಜವಾಬ್ದಾರಿ ಹಾಗೂ ಪಾತ್ರಗಳು, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಮತ್ತು ಅವುಗಳ ಪ್ರಾಮುಖ್ಯತೆ, ಜೈವಿಕ ಸಂಪನ್ಮೂಲಗಳು ಮತ್ತು ಅವುಗಳ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕಸಂಪನ್ಮೂಲಗಳ ಬಳಕೆಯ ಪ್ರಯೋಜನಗಳ ನ್ಯಾಯಸಮ್ಮತ ಹಂಚಿಕೆ ಬಗ್ಗೆ ವಿವರವಾದ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಹಾಗೂ ಮಂಡಳಿಯ ತಾಂತ್ರಿಕ ಸಿಬ್ಬಂದಿಗಳ ಮುಖಾಂತರ ಅರಿವನ್ನು ಮೂಡಿಸಲಾಗುತ್ತಿದೆ.

## 7.1 2021-2022ನೇ ಸಾಲಿನಲ್ಲಿ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮ:

| ದಿನಾಂಕ | ಭಾಗವಹಿಸಿದವರು | ಕಾರ್ಯಗಾರ ನಡೆದ ಸ್ಥಳ |
|---|---|---|
| 12.11.2021 | ಕಲಬುರಗಿ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳಿಗೆ ನಡೆದ ಕಾರ್ಯಗಾರ | ಶ್ರೀ.ಹಿಂಗುಲಾಂಬಿಕಾ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಕಲಬುರಗಿ |
| 07.12.2021 | ಚಾಮರಾಜನಗರ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳಿಗೆ ನಡೆದ ಕಾರ್ಯಗಾರ | ಬೂದಿಪಡಗ ಸಭಾ ಭವನ, ಪುಣಜೂರು ವಲಯ, ಬಿ.ಆರ್.ಟಿ ಹುಲಿ ಸಂರಕ್ಷಣಾ ಪ್ರದೇಶ, ಚಾಮರಾಜನಗರ |
| 28.12.2021 | ಬೆಂಗಳೂರು ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳಿಗೆ ನಡೆದ ಕಾರ್ಯಗಾರ | ಆರ್.ಎಲ್.ಜಾಲಪ್ಪ, ತಾಂತ್ರಿಕ ಮಹಾವಿದ್ಯಾಲಯ, ದೊಡ್ಡಬಳ್ಳಾಪುರ. |
| 25/02/2022 | ಶಿವಮೊಗ್ಗ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳಿಗೆ ನಡೆದ ಕಾರ್ಯಗಾರ | ಸರ್ಕಾರಿ ಆಯುರ್ವೇದಿಕ ಕಾಲೇಜು, ಶಿವಮೊಗ್ಗ. |
| 23/03/2022 | ರಾಜ್ಯ ಮಟ್ಟದ ಔಷಧೀಯ ಸಸ್ಯಗಳ ಖರೀದಿದಾರರ ಹಾಗೂ ಮಾರಾಟಗಾರರ ಸಭೆ. | ಆರ್ಕಿಡ್ ರೆಸಾರ್ಟ್, ಯಲಹಂಕ, ಬೆಂಗಳೂರು. |





**ಕಲಬುರ್ಗಿ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳ ಕಾರ್ಯಗಾರ**

## 7.2. ವರ್ಷವಾರು ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಗಳ ವಿವರ:

| ಕ್ರ.ಸಂ | ವರ್ಷ | ಕಾರ್ಯಕ್ರಮಗಳ ಸಂಖ್ಯೆ |
|---|---|---|
| 1 | 2003-2004 | ಮಂಡಳಿಯ ಸ್ಥಾಪನೆ |
| 2 | 2004-2005 | 15 |
| 3 | 2005-2006 | 10 |
| 4 | 2006-2007 | 15 |
| 5 | 2007-2008 | 29 |

| | | |
|---|---|---|
| 6 | 2008-2009 | 15 |
| 7 | 2009-2010 | 53 |
| 8 | 2010-2011 | 53 |
| 9 | 2011-2012 | 17 |
| 10 | 2012-2013 | 41 |
| 11 | 2013-2014 | 35 |
| 12 | 2014-2015 | 133 |
| 13 | 2015-2016 | 140 |
| 14 | 2016-2017 | 253 |
| 15 | 2017-2018 | 215 |
| 16 | 2018-2019 | 52 |
| 17 | 2019-2020 | 23 |
| 18 | 2020-2021 | 01 |
| 19 | 2021-2022 | 05 |
| | **ಒಟ್ಟು** | **1105** |






**ಚಾಮರಾಜನಗರ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗಳ ಕಾರ್ಯಾಗಾರ**

**8. ಜೀವವೈವಿಧ್ಯ ಪಾರಂಪರಿಕ ತಾಣಗಳು:**

**8.1 ಜೀವವೈವಿಧ್ಯ ಪಾರಂಪರಿಕ ತಾಣಗಳ ಘೋಷಣೆಗೆ ಗುರುತಿಸಲಾದ ಪ್ರದೇಶಗಳ ವಿವರ ಕೆಳಕಂಡಂತಿವೆ:**

1. ಕುಮಟಾ ತಾಲ್ಲೂಕಿನ ಅಘನಾಶಿನಿ ಮುಖಜಭೂಮಿಯ ಕಗ್ಗ ಭತ್ತದ ಪ್ರದೇಶ (ಉತ್ತರಕನ್ನಡಜಿಲ್ಲೆ)
2. ಕೋಲಾರ ಜಿಲ್ಲೆಯ ಅಂತರಗಂಗೆ ಬೆಟ್ಟ.
3. ಗುಡಿಬಂಡೆ ತಾಲ್ಲೂಕಿನ ಶ್ರೀ ಲಕ್ಷ್ಮೀ ಆದಿನಾರಾಯಣ ಬೆಟ್ಟ (ಚಿಕ್ಕಬಳ್ಳಾಪುರ ಜಿಲ್ಲೆ)
4. ಕುಳುವನಹಳ್ಳಿ ಗ್ರಾಮ ಪಂಚಾಯಿತಿ, ನೆಲಮಂಗಲದಲ್ಲಿರುವ ಮಹಿಮಾರಂಗಬೆಟ್ಟ (ಬೆಂಗಳೂರು ಗ್ರಾಮಾಂತರಜಿಲ್ಲೆ)

5. ಸುಳ್ಯ ತಾಲ್ಲೂಕಿನ (ದಕ್ಷಿಣಕನ್ನಡಜಿಲ್ಲೆ) ಕುಮಾರಧಾರ ನದಿಯ ಉರುಂಬಿ ಗ್ರಾಮದ ವಿಸ್ತಾರ.
6. ಕತ್ತಲೆಕಾನ್ ರಾಮಪತ್ರೆ ಜಡ್ಡಿ, ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ
7. ರೋರಿಚ್ ಮತ್ತು ದೇವಿಕಾರಾಣಿ ಎಸ್ಟೇಟ್ (ತಾತಗುಣಿ ಎಸ್ಟೇಟ್), ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ



**9. ಸಂಶೋಧನಾ ಯೋಜನೆಗಳು/ಅಧ್ಯಯನಗಳು:**

**9.1 2021-22ನೇ ಸಾಲಿನಲ್ಲಿ ಮಂಜೂರಾದ ಸಂಶೋಧನಾ ಯೋಜನೆಗಳು/ಅಧ್ಯಯನಗಳು ಕೆಳಕಂಡಂತಿವೆ.**

| ಸಂಖ್ಯೆ | ಯೋಜನಾ ಶೀರ್ಷಿಕೆ ಹಾಗೂ ಪ್ರಧಾನ ಸಂಶೋಧಕರ ವಿವರ | ಅವಧಿ | ಒಟ್ಟು ಅನುದಾನ (ಲಕ್ಷಗಳಲ್ಲಿ) |
|---|---|---|---|
| 1 | **ಕರ್ನಾಟಕದ ಆಯ್ದ ಅರಣ್ಯ ವಿಭಾಗಗಳಲ್ಲಿ ಔಷಧೀಯ ಸಸ್ಯಗಳ ಮೌಲ್ಯವರ್ಧನೆ ಮತ್ತು ಸರಬರಾಜು ಸರಪಳಿಯ ನಿರ್ವಹಣೆ:** ಡಾ.ಮಲ್ಲಿಕಾರ್ಜುನ ಜಿ.ಕೆರುಟಗಿ, ಪ್ರಾಧ್ಯಪಕರು (ಕೃಷಿ ಅರ್ಥಶಾಸ್ತ್ರ) ವಿಭಾಗ, ಮುಖ್ಯಸ್ಥರು, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ | 1.6 ವರ್ಷಗಳು | 6.39 |
| 2 | **ಪಶ್ಚಿಮ ಘಟ್ಟಗಳ ಮಧ್ಯಭಾಗದ ಸೇವಿಸಬಹುದಾದ ಕಾಡು ಹಣ್ಣುಗಳ ಸಮೀಕ್ಷೆ ದಾಖಲಾತಿ ಹಾಗೂ ಸಮುದಾಯ ಆಧಾರಿತ ಜೆರ್ಮ್ ಪ್ಲಾಸ್ಮ್‌ನ ಸ್ಥಾಪನೆ:** ಡಾ.ಸತೀಶ್ ಬಿ.ಎನ್. ಸಹಾಯಕ ಪ್ರಾಧ್ಯಾಪಕರು, ಅರಣ್ಯ ಪದಾರ್ಥಗಳ ಬಳಕೆ ವಿಭಾಗ, ಅರಣ್ಯ ಕಾಲೇಜು, ಪೊನ್ನಂ ಪೇಟೆ, ಕೊಡಗು ಜಿಲ್ಲೆ. | 2 ವರ್ಷಗಳು | 8.30 |

### 9.2 ಪ್ರಗತಿಯಲ್ಲಿರುವ ಸಂಶೋಧನಾ ಯೋಜನೆಗಳು

| ಸಂಖ್ಯೆ | ಯೋಜನಾ ಶೀರ್ಷಿಕೆ ಹಾಗೂ ಪ್ರಧಾನ ಸಂಶೋಧಕರ ವಿವರ | ಅವಧಿ | ಒಟ್ಟು ಅನುದಾನ (ಲಕ್ಷಗಳಲ್ಲಿ) |
|---|---|---|---|
| 1 | **ಕರ್ನಾಟಕ ರಾಜ್ಯದ ಶೋಲಾ ಅರಣ್ಯ ಪ್ರದೇಶಗಳಲ್ಲಿನ ಹುಲ್ಲು ಪ್ರಭೇಧಗಳ ಜಟಿಲತೆ:** ಡಾ.ಬಿ.ಸಿ.ನಾಗರಾಜ್, ಅಸೋಸಿಯೇಟ್ ಪ್ರೋಫೆಸರ್, ಪರಿಸರ ವಿಜ್ಞಾನ ಇಲಾಖೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. | 3 ವರ್ಷಗಳು | 21.53 |
| 2 | **ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಹೊನ್ನಾವರ ಪಟ್ಟಣಗಳ ಸಸ್ಯ ವೈವಿಧ್ಯತೆ:** ಶ್ರೀ.ಶಿವಾನಂದ ಭಟ್ ಎಸ್. ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜು, ಕಾರವಾರ | 2 ವರ್ಷಗಳು | 5.27 |

### 10. ಬಳಕೆ ಮತ್ತು ಲಾಭ ಹಂಚಿಕೆಗಳ ಅನುಷ್ಠಾನ

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆಯ ಅವಕಾಶಗಳನ್ನು ಪಾಲುದಾರರಿಗೆ ತಿಳಿಯುವಂತೆ ಮತ್ತು ಅನುಸರಿಸುವಂತೆ ಮಾಡುವುದು ಮತ್ತು ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಸಂಬಂಧಿತ ಲಾಭ ಹಂಚಿಕೆಯ ಅವಕಾಶಗಳಿಗೆ ಒತ್ತು ನೀಡುವುದರೊಂದಿಗೆ ಜೈವಿಕವೈವಿಧ್ಯತೆ ಅಧಿನಿಯಮ ಮತ್ತು ನಿಯಮಗಳ ಸಾಮರ್ಥ್ಯವನ್ನು ಬಲವರ್ಧನೆಗೊಳಿಸುವುದು ಮತ್ತು ಅರಿವನ್ನು ಹೆಚ್ಚಿಸುವುದು. ಜೀವವೈವಿಧ್ಯ ಒಡಂಬಡಿಕೆಯ ಮುಖ್ಯ ಉದ್ದೇಶಗಳಲ್ಲಿ ಒಂದಾದ ರಾಜ್ಯ ವ್ಯಾಪ್ತಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುತ್ತಿರುವ ಘಟಕ/ಕಂಪನಿಗಳಿಂದ ಜೈವಿಕವೈವಿಧ್ಯ ಅಧಿನಿಯಮ, 2002 ಮತ್ತು ಅದರ ನಿಬಂಧನೆಗಳನ್ನು ಅನುಸರಣೆ ಮಾಡುವ ಕಾರ್ಯವಾಗಿರುತ್ತದೆ.

**ಎಬಿಎಸ್ ಫಾರಂಗಳ ಸಲ್ಲಿಕೆಯ ವ್ಯಾಖ್ಯಾನಗಳು:**

**ಫಾರಂ-1** – ಜೈವಿಕವೈವಿಧ್ಯ ಅಧಿನಿಯಮ 2002ರಡಿಯಲ್ಲಿ, ನಿಯಮ 15ರ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರಂತೆ ಸಂಶೋಧನೆಗಾಗಿ ಅಥವಾ ವಾಣಿಜ್ಯ ಬಳಕೆಗಾಗಿ ಜೈವಿಕ ಸಂಪನ್ಮೂಲಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಪಡೆದುಕೊಳ್ಳಲು ಪ್ರಾಧಿಕಾರದ ಅನುಮೋದನೆ ಪಡೆಯಬಯಸುವ ಯಾರೇ ವ್ಯಕ್ತಿಯು **ಫಾರಂ-1ರಲ್ಲಿ** ಅರ್ಜಿಯನ್ನು ಸಲ್ಲಿಸತಕ್ಕದ್ದು.

**ಫಾರಂ-2** – ಜೈವಿಕವೈವಿಧ್ಯ ಅಧಿನಿಯಮ 2002ರಡಿಯಲ್ಲಿ, ನಿಯಮ 17ರ ಜೈವಿಕವೈವಿಧ್ಯ ನಿಯಮಗಳು 2004ರಂತೆ ವಾಣಿಜ್ಯ ಬಳಕೆಗಾಗಿ ಸಂಶೋಧನಾ ಫಲಿತಾಂಶಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅನುಮೋದನೆಯ ಮೇರೆಗೆ ವಿದೇಶಿಗರಿಗೆ, ಕಂಪೆನಿಗಳಿಗೆ ಹಾಗೂ ಎನ್ಆರ್ಐಗಳಿಗೆ ವರ್ಗಾಯಿಸಲು **ಫಾರಂ-2ರಲ್ಲಿ** ಅರ್ಜಿಯನ್ನು ಸಲ್ಲಿಸತಕ್ಕದ್ದು.

**ಫಾರಂ-3** – ಜೈವಿಕವೈವಿಧ್ಯ ಅಧಿನಿಯಮ 2002ರಡಿಯಲ್ಲಿ, ನಿಯಮ 18ರ ಜೈವಿಕವೈವಿಧ್ಯ ನಿಯಮಗಳು 2004ರಲ್ಲಿ ಭೌದ್ಧಿಕ ಆಸ್ತಿ ಹಕ್ಕಿಗಾಗಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅನುಮೋದನೆಯ ಮೇರೆಗೆ **ಫಾರಂ-3ರಲ್ಲಿ** ಅರ್ಜಿಯನ್ನು ಸಲ್ಲಿಸಕ್ಕದ್ದು.

**ಫಾರಂ-4** ಜೈವಿಕವೈವಿಧ್ಯ ಕಾಯಿದೆ 2002ರಡಿಯಲ್ಲಿ ಪ್ರವೇಶಿಸಿದ ಜೈವಿಕ ಸಂಪನ್ಮೂಲಗಳು ಮತ್ತು ಸಂಬಂಧಿತ ಸಾಂಪ್ರದಾಯಿಕ ಜ್ಞಾನದ ಮೂರನೇ ವ್ಯಕ್ತಿಯ ವರ್ಗಾವಣೆಗಾಗಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಪೂರ್ವಾನುಮತಿ ಪಡೆಯಲು ಜೈವಿಕ ವೈವಿಧ್ಯತೆಯ ನಿಯಮಗಳು, 2004ರನಿಯಮ 19ರಡಿಯಲ್ಲಿ ಸೂಚಿಸಲಾದ **ಫಾರಂ-4ರ**ಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

2021-22ನೇ ಸಾಲಿನಲ್ಲಿ ಜೈವಿಕ ಉದ್ದಿಮೆಗಳಿಂದ 78 ಫಾರಂ-1 ಅರ್ಜಿಗಳು ಸ್ವೀಕೃತವಾಗಿದ್ದು ರೂ 78,000/- ಶುಲ್ಕ ಸಂಗ್ರಹವಾಗಿದೆ. ಅದರಂತೆ 30 ಬಳಕೆ ಮತ್ತು ಲಾಭ ಹಂಚಿಕೆಯ (ABS) ಫಾರಂ-ಎ ಅರ್ಜಿಗಳು ಸ್ವೀಕೃತವಾಗಿದ್ದು ರೂ.33,40,000/-ಲಕ್ಷಗಳನ್ನು ಶುಲ್ಕ ರೂಪದಲ್ಲಿ ಹಣವನ್ನು ಸಂಗ್ರಹಿಸಲಾಗಿದೆ.

**10.1. ಕೇಂದ್ರ ಸರ್ಕಾರದ ಸಂಸತ್ತಿನಲ್ಲಿ ಜೈವಿಕವೈವಿಧ್ಯ ಕಾಯ್ದೆ 2002ರ ತಿದ್ದುಪಡಿ ಮಸೂದೆ:**

2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಜೈವಿಕವೈವಿಧ್ಯ ಕಾಯ್ದೆ 2002ರ ತಿದ್ದುಪಡಿ ಮಸೂದೆಯನ್ನು ಮಂಡಿಸಿತು. ಸದರಿ ಮಸೂದೆಯ ಕೆಲವು ಅಂಶಗಳು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ನ್ಯಾಯ ಸಮ್ಮತ ಲಾಭ ಹಂಚಿಕೆಯಲ್ಲಿ ವ್ಯತ್ಯಯವಾಗುವುದರಿಂದ ಮಸೂದೆಯನ್ನು ಸಂಸತ್ತಿನ ಜಂಟಿ ಸಮಿತಿಗೆ ಪರಿಶೀಲನೆಗೆ ಒಪ್ಪಿಸಲು ಸೂಚಿಸಲಾಯಿತು. ಈ ಸಮಿತಿಯ ಸಭೆಗೆ 08/02/2022 ರಂದು ಕೆಲವು ಆಯ್ದ ರಾಜ್ಯ ಜೀವವೈವಿಧ್ಯ ಮಂಡಳಿಗಳೊಂದಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯನ್ನು ಕೂಡ ಆಹ್ವಾನಿಸಲಾಗಿತ್ತು. ಸದರಿ ಸಭೆಗೆ ಮಂಡಳಿಯಿಂದ ಸದಸ್ಯ ಕಾರ್ಯದರ್ಶಿಗಳ ಆದೇಶದ ಮೇರೆಗೆ ಮಂಡಳಿಯ ಅಧಿಕಾರಿಗಳಾದ ಶ್ರೀಮತಿ. ಪವಿತ್ರ ಕೆ.ಎ, ಉಪ ನಿರ್ದೇಶಕರು (ತೋಟಗಾರಿಕೆ), ಶ್ರೀ.ಕೆ.ಆರ್.ಪ್ರಸನ್ನ, ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್) ಮತ್ತು ಶ್ರೀ.ನಿಖಿಲ್.ಎನ್ ತಾಂತ್ರಿಕ ಕಾರ್ಯನಿರ್ವಾಹಕರು (ಎಬಿಎಸ್)ರವರು ಹಾಜರಿದ್ದು, ಮಸೂದೆಯಲ್ಲಿರುವ ಕಳವಳಕಾರಿಯಾಗಿರುವ ಅಂಶಗಳನ್ನು ಸಮಿತಿಗೆ ಮನವರಿಕೆ ಮಾಡಿಕೊಡಲಾಯಿತು ಹಾಗೂ ಜೈವಿಕವೈವಿಧ್ಯ ಕಾಯ್ದೆಯನ್ನು ಬಲವರ್ಧಿಸಿ ಉನ್ನತೀಕರಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಲಾಯಿತು. ಈ ಬಗ್ಗೆ ತಯಾರಿಸಲಾದ ಪಿಪಿಟಿ ಕೆಳಗಿನಂತಿದೆ.






**10.2.ಎಬಿಎಸ್ ಅನುದಾನವನ್ನು ಎಂಟು ಮಾದರಿ ತಾಲ್ಲೂಕು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಬಿಡುಗಡೆ:**

2021-22 ನೇ ಸಾಲಿನಲ್ಲಿ ಸ್ಥಳೀಯ ಮಟ್ಟದಲ್ಲಿ ಜೈವಿಕ ಸಂಪನ್ಮೂಲಗಳ ಸಂರಕ್ಷಣಾ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಸುಸ್ಥಿರ ಬಳಕೆಗಾಗಿ ಎಬಿಎಸ್ ಅನುದಾನವನ್ನು ಎಂಟು ತಾಲ್ಲೂಕು ಪಂಚಾಯಿತಿ ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಾದ ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ, ಶಿರಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಬಳ್ಳಾರಿಗೆ ಸೇರಿ ಒಟ್ಟು 57.23 ಲಕ್ಷ ರೂಗಳನ್ನು ನೀಡಲಾಯಿತು,

**ವಿವರಗಳು ಈ ಕೆಳಗಿನಂತಿವೆ:**

| **ಕ್ರಮ ಸಂಖ್ಯೆ** | **ತಾಲ್ಲೂಕು ಹೆಸರು** | **ನೀಡಲಾದ ಅನುದಾನ** |
|---|---|---|
| 1 | ಸಾಗರ | 9,20,000 |
| 2 | ಸೊರಬ | 8,60,000 |
| 3 | ಹೊಸನಗರ | 8,40,000 |
| 4 | ತೀರ್ಥಹಳ್ಳಿ | 3,36,300 |
| 5 | ಶಿರಸಿ | 8,60,000 |
| 6 | ಸಿದ್ದಾಪುರ | 8,85,000 |
| 7 | ಯಲ್ಲಾಪುರ | 8,80,000 |
| 8 | ಬಳ್ಳಾರಿ | 1,42,500 |

ಇದರ ಅಂಗವಾಗಿ ಸದರಿ ಅನುದಾನದ ಸೂಕ್ತ ಉಪಯೋಗವಾಗಿರುವ ಕುರಿತು ಪರಿಶೀಲಿಸಲು ಮತ್ತು ಸಮಿತಿಯ ಪ್ರಗತಿ ಹಾಗೂ ಮುಂದಿನ ರೂಪುರೇಷೆಗಳ ಬಗ್ಗೆ ಚರ್ಚಿಸಲು ದಿನಾಂಕ 22/02/2022 ರಂದು ಸೊರಬ ತಾಲ್ಲೂಕು ಪಂಚಾಯಿತಿ ಮತ್ತು ದಿನಾಂಕ 23/02/2022ರಂದು ಸಾಗರ ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡಿ ಪರಿಶೀಲಿಸಿ ಚರ್ಚಿಸಲಾಯಿತು.

2021-22ನೇ ಸಾಲಿನಲ್ಲಿ **158** ಪಾವತಿ ಮಾಡದ ಕಂಪನಿಗಳು ಮತ್ತು ಉದ್ಯಮಗಳ ವಿರುದ್ದ ನಿರ್ಧಿಷ್ಟ ವಲಯಗಳೊಂದಿಗೆ ನೋಟೀಸ್‌ಗಳನ್ನು ನೀಡಲಾಗಿದೆ.

**11. ಕಾನೂನು ಪ್ರಕರಣಗಳು:**

2021-22ನೇ ಸಾಲಿನಲ್ಲಿ ಮಂಡಳಿಯು ನಡೆಸುತ್ತಿರುವ ಕಾನೂನು ಪ್ರಕರಣಗಳು ಕೆಳಕಂಡಂತಿವೆ:

| **ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯ** | | |
|---|---|---|
| **ಕ್ರ.ಸಂ** | **ಪ್ರಕರಣದ ಸಂಖ್ಯೆ** | **ಪ್ರಕರಣದ ಪ್ರಗತಿ** |
| 01 | 2014ರ ವಿಶೇಷ ಅರ್ಜಿ ಸಂಖ್ಯೆ 539ರ ಪ್ರಕರಣವನ್ನು 2015ರಲ್ಲಿ ಕ್ರಿಮಿನಲ್ ಮೇಲ್ಮನವಿ ನಂ. 1720, ಆಗಿ ವರ್ಗಾವಣೆಗೊಂಡಿದ್ದು, ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮತ್ತು ಇತರರು ಸಲ್ಲಿಸಿದ ಎಸ್‌ಎಲ್‌ಪಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಹಾಗೂ ಇಬ್ಬರು ಇತರರ ವಿರುದ್ಧ ಸಲ್ಲಿಸಿದ ಮೇಲ್ಮನವಿ. | ಭಾರತದ ಘನ ಸರ್ವೋಚ್ಚ ನ್ಯಾಯಾಲಯದಡಿಯಲ್ಲಿ ಬಾಕಿ ಇರುತ್ತದೆ |

| | | |
|---|---|---|
| 02 | 2014ರ ವಿಶೇಷ ಅರ್ಜಿ ಸಂಖ್ಯೆ 629ರ ಪ್ರಕರಣ 2015ರಲ್ಲಿ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ 1721 ಆಗಿ ವರ್ಗಾವಣೆಗೊಂಡಿದ್ದು, ಡಾ.ಎಸ್.ಎ. ಪಟೇಲ್‌ರವರು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಕರ್ನಾಟಕ ರಾಜ್ಯ ಮತ್ತು ಇತರರ ವಿರುದ್ಧ ಸಲ್ಲಿಸಿದ ಮೇಲ್ಮನವಿ. | ಭಾರತದ ಘನ ಸರ್ವೋಚ್ಛ ನ್ಯಾಯಾಲಯದಡಿಯಲ್ಲಿ ಬಾಕಿ ಇರುತ್ತದೆ |
| 03 | 2014ರ ವಿಶೇಷ ಅರ್ಜಿ (ಸಿವಿಲ್) ಸಂಖ್ಯೆ 7951ರ ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ ಮತ್ತು ಎಎನ್‌ಆರ್‌ರವರು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಮತ್ತು ಇತರರ (ಪಿಐಎಲ್) ವಿರುದ್ಧ ಸಲ್ಲಿಸಿದ ಸಿವಿಲ್ ಅರ್ಜಿ. | ಭಾರತದ ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ |
| 04 | ಕರ್ನಾಟಕ ಜೀವವೈವಿಧ್ಯ ಮಂಡಳಿ ವಿರುದ್ಧ ಚಂದ್ರಬಾಲ್ ಸಿಂಗ್ ಸಲ್ಲಿಸಿದ ಸಿವಿಲ್ ಅರ್ಜಿ ಸಂ 933/2020. | ಭಾರತದ ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. |
| **ಮಾನ್ಯ ಕರ್ನಾಟಕದ ಉಚ್ಛ ನ್ಯಾಯಾಲಯ** | | |
| **ಕ್ರ.ಸಂ** | **ಪ್ರಕರಣದ ಸಂಖ್ಯೆ** | **ಪ್ರಕರಣದ ಪ್ರಗತಿ** |
| 01 | 2014ರ ಕ್ರಿಮಿನಲ್ ಅರ್ಜಿ ಸಂಖ್ಯೆ 100616 ಮೆ. ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂ.ಲಿಮಿಟೆಡ್ ಮತ್ತು ಇತರರು ಸಿ. ಅಚಲೇಂದ್ರ ರೆಡ್ಡಿ ಮತ್ತು ಇತರರ ವಿರುದ್ಧ ಸಲ್ಲಿಸಿದ ಅರ್ಜಿ. | ಕರ್ನಾಟಕ ರಾಜ್ಯದ ಧಾರವಾಡದ ಘನ ಉಚ್ಚನ್ಯಾಯಾಲಯ ಬಾಕಿಯಿರುತ್ತದೆ. |
| 02 | 2014ರ ಕ್ರಿಮಿನಲ್ ಅರ್ಜಿ ಸಂಖ್ಯೆ 100618 ಮೆ. ಸದ್ಗುರು ಮ್ಯಾನೇಜ್‌ಮೆಂಟ್ ಮತ್ತು ಇತರರು ಸಿ.ಅಚಲೇಂದ್ರ ರೆಡ್ಡಿ ಮತ್ತು ಇತರರ ವಿರುದ್ಧ ಸಲ್ಲಿಸಿದ ಅರ್ಜಿ. | ಧಾರವಾಡದ ಘನ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. |
| 03 | ರಿಟ್ ಪಿಟಿಷನ್ ಸಂ. 2336/2020 (ಜಿ.ಎಂ.ಆರ್‌ಇಎಸ್), ಪಿಐಎಲ್, ಉತ್ತರ ಕನ್ನಡ ಜಿಲ್ಲೆಯ ಫಿಷರ್‌ಮ್ಯಾನ್ ಅಸೋಸಿಯೇಷನ್ ಫೋರಮ್ ವಿರುದ್ಧ ಕರ್ನಾಟಕ ರಾಜ್ಯದ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯ ಮತ್ತು ಇತರರು ಸಲ್ಲಿಸಿದ ಅರ್ಜಿ. | ಬೆಂಗಳೂರಿನ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ವಿಲೇವಾರಿ ಯಾಗಿರುತ್ತದೆ. |
| 04 | ರಿಟ್ ಪಿಟಿಷನ್ ಸಂ. 681/2021 (ಜಿ.ಎಂ.ಆರ್‌ಇಎಸ್), ಪಿಐಎಲ್, ಡಾ. ಕೆ.ಬಿ. ವಿಜಯಕುಮಾರ್ ವಿರುದ್ಧ ಕರ್ನಾಟಕ ರಾಜ್ಯದ ಕಾರ್ಯದರ್ಶಿ ಮತ್ತು ಇತರರು ಸಲ್ಲಿಸಿದ ಅರ್ಜಿ. | ಬೆಂಗಳೂರಿನ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ |
| **ಮಾನ್ಯ ರಾಷ್ಟ್ರೀಯ ಹಸಿರು ಪ್ರಾಧಿಕಾರ** | | |
| **ಕ್ರ.ಸಂ** | **ಪ್ರಕರಣದ ಸಂಖ್ಯೆ** | **ಪ್ರಕರಣದ ಪ್ರಗತಿ** |
| 01 | 2015ರನ್ವಯ ಅರ್ಜಿ ಸಂ.49/2015 ಶ್ರೀ ಎ. ಪುರುಷೋತ್ತಮರವರು ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ. | ಈ ಪ್ರಕರಣವು ರಾಷ್ಟ್ರೀಯ ಹಸಿರು ಪ್ರಾಧಿಕಾರದಡಿಯಲ್ಲಿ ಬಾಕಿಯಿರುತ್ತದೆ. |
| 02 | 2015ರನ್ವಯ ಮೂಲ ಅರ್ಜಿ ಸಂ. 83/2015(ಎಸ್.ಜೆಡ್) ಶ್ರೀ ಎಚ್. ಎ. ಕಿಶೋರ್ ರವರು ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ ಈ ಪ್ರಕರಣವು | ಈ ಪ್ರಕರಣವು ವಿಲೇವಾರಿ ಯಾಗಿರುತ್ತದೆ. |
| 03 | 2015ರನ್ವಯ ಮೂಲ ಅರ್ಜಿ ಸಂ. 347 /2015(ಎಸ್.ಜೆಡ್) ಶ್ರೀ ಚಂದ್ರ ಬಾಲ ಸಿಂಗ್ ರವರು ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ. ಈ ಪ್ರಕರಣವು | ಈ ಪ್ರಕರಣವು ವಿಲೇವಾರಿ ಯಾಗಿರುತ್ತದೆ. |

| | | |
|---|---|---|
| 04 | 2014ರನ್ವಯ ಮೂಲ ಅರ್ಜಿ ಸಂ. 10/2014 ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ ಮತ್ತು ಇತರರ ವಿರುದ್ಧ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಮತ್ತು ಇತರರು. | ಈ ಪ್ರಕರಣವು ರಾಷ್ಟ್ರೀಯ ಹಸಿರು ಪ್ರಾಧಿಕಾರದಡಿಯಲ್ಲಿ ಬಾಕಿಯಿರುತ್ತದೆ. |

## 12. ವಿಶೇಷ ಕಾರ್ಯಕ್ರಮಗಳು:

### 12.1. ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ:

ಮಂಡಳಿಯು 15ನೇ ಜುಲೈ 2021 ರಿಂದ 15ನೇ ಆಗಸ್ಟ್ 2021ರವರೆಗೆ "ಪ್ರಕೃತಿಗೆ ಒದಗಿದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಾವೂ ಕೂಡ ಪಾಲುದಾರರಾಗಿದ್ದೇವೆ"ಎಂಬ ಘೋಷಾವಾಕ್ಯದಡಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ಇವರ ಸಹಭಾಗಿತ್ವದೊಂದಿಗೆ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯನ್ನು ಆಚರಿಸಿದೆ.

ಈ ಸಂದರ್ಭದಲ್ಲಿ ಜೀವವೈವಿಧ್ಯ ಸಂರಕ್ಷಣೆ ಕುರಿತು ಶ್ರಮಿಸಿದವರಿಗೆ ಜೀವವೈವಿಧ್ಯ ಪ್ರಶಸ್ತಿಯನ್ನು ಪ್ರತಿ ಜಿಲ್ಲಾ ಮಟ್ಟದಲ್ಲಿ ನೀಡಲಾಗಿದೆ.




**ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ, ಜಿಲ್ಲಾ ಪಂಚಾಯತಿ, ಮೈಸೂರು ಹಾಗೂ ರಾಯಚೂರು**




**ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ**





**ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ, ಅಂತರಸಂತೆ ಗ್ರಾಮ ಪಂಚಾಯಿತಿ, ಮೈಸೂರು ಜಿಲ್ಲೆ**




**ಜೀವವೈವಿಧ್ಯ ಸಂರಕ್ಷಣೆಗೆ ಶ್ರಮಿಸಿದವರಿಗೆ 2021–22ನೇ ಸಾಲಿನ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ**

### 12.2. ಕರ್ನಾಟಕ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯ ಸಮ್ಮೇಳನ

ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರದ ಸಹಯೋಗದಲ್ಲಿ ದಿನಾಂಕ 23/12/2021 ರಂದು **ಕರ್ನಾಟಕ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯ ಸಮ್ಮೇಳನವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಶ್ರೀ ಪವಾಡ ಬಸವಣ್ಣ ದೇವರ ಮಠದಲ್ಲಿ** ಪಾರಂಪರಿಕ ವೈದ್ಯರುಗಳಿಗೆ ಜೈವಿಕವೈವಿಧ್ಯ ಕಾಯ್ದೆ 2002 ಹಾಗೂ ಔಷಧೀಯ ಸಸ್ಯಗಳ ಪ್ರಾಮುಖ್ಯತೆ, ಮೌಲ್ಯ ಮತ್ತು ಸಂರಕ್ಷಣೆಯ ಕುರಿತು ತರಬೇತಿ ಕಾರ್ಯಗಾರವನ್ನು ಹಮ್ಮಿಕೊಂಡಿರುತ್ತದೆ.





**ಕರ್ನಾಟಕ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯ ಸಮ್ಮೇಳನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಶ್ರೀ ಪವಾಡ ಬಸವಣ್ಣದೇವರ ಮಠ**

## 13. ಪ್ರಕಟಣೆಗಳು:

1. 2020-21ನೇ ಸಾಲಿನ ವಾರ್ಷಿಕ ವರದಿ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ವಾರ್ತಾ ಪತ್ರಿಕೆ.
3. ಕರ್ನಾಟಕದ ವಿಕೇಂದ್ರೀಕೃತ ಜೀವವೈವಿಧ್ಯ ನಿರ್ವಹಣೆಯ ಅನುಭವಗಳು

| 2020-21ನೇ ಸಾಲಿನ ವಾರ್ಷಿಕ ವರದಿ | ವಾರ್ತಾ ಪತ್ರಿಕೆ. | ಕರ್ನಾಟಕದ ವಿಕೇಂದ್ರೀಕೃತ ಜೀವವೈವಿಧ್ಯ ನಿರ್ವಹಣೆಯ ಅನುಭವಗಳು |
|---|---|---|
|  |   |   |

14. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಹಣಕಾಸಿನ ವರ್ಷವಾದ 2021-22ನೇ ಸಾಲಿನ ಆಯವ್ಯಯ ಮತ್ತು ವೆಚ್ಚಗಳ ವರದಿ:

| ಕ್ರ. ಸಂ | ಅನುದಾನದ ಶೀರ್ಷಿಕೆ | ಬಿಡುಗಡೆಯಾದ ಮೊತ್ತ / ಲಭ್ಯತೆ | ಗಳಿಸಿದ ಬಡ್ಡಿ | ಮಂಡಳಿಯ ಸ್ವಂತ ಮೂಲದಿಂದ ಹೊಂದಿಸಲಾದ ಮೊತ್ತ / ಬಡ್ಡಿ | ವೆಚ್ಚಕ್ಕಾಗಿ ಲಭ್ಯವಿರುವ ಒಟ್ಟು ಮೊತ್ತ | ನಿಶ್ಚಿತ ಖರ್ಚು | ಉಳಿಕೆ |
|---|---|---|---|---|---|---|---|
| 1 | 101-ವೇತನ | 72,18,000.00 | - | - | 72,18,000.00 | 67,02,988.00 | 5,15,012.00 |
| 2 | 103- ಸಾಮಾನ್ಯ | 143,00,000.00 | 8,66,674.00 | 39,09,174.00 | 190,75,848.00 | 190,75,848.00 | - |
| 3 | 102- ಆಸ್ತಿ ರಚನೆ | 15,00,000.00 | - | - | 15,00,000.00 | - | 15,00,000.00 |
| 4 | 200- ನಿರ್ವಹಣೆ | 35,00,000.00 | - | - | 35,00,000.00 | 23,98,199.00 | 11,01,801.00 |
| 5 | 115- ಹೊರಗುತ್ತಿಗೆ | 87,21,000.00 | - | - | 87,21,000.00 | 86,63,125.39 | 57,874.61 |
| 6 | CAMPA (ಕಂಪಾ) | 500,00,000.00 | 4,58,636.00 | - | 504,58,636.00 | 504,55,000.00 | 3,636.00 |
| 7 | NBA (ಎನ್‌ಬಿಎ) | 15,50,000.00 | - | 3,72,656.27 | 19,22,656.27 | 19,22,656.27 | - |
| 8 | NMPB (ಎನ್.ಎಂ.ಪಿ.ಬಿ) | 41,95,676.00 | 64,567.00 | - | 42,60,243.00 | 42,60,243.00 | - |
| 9 | ABS (ಎಬಿಎಸ್) | 83,90,851.00 | - | - | 83,90,851.00 | 53,87,500.00 | 30,03,351.00 |
| 10 | ಸ್ವಂತ | 28,29,388.48 | - | - | 28,29,388.48 | 14,03,919.00 | 14,25,469.48 |
| | ಒಟ್ಟು | 1022,04,915.48 | 13,89,877.00 | 42,81,830.27 | 1078,76,622.75 | 1002,69,478.66 | 76,07,144.09 |

## 15. ಪೋಟೋ ಗ್ಯಾಲರಿ

**ದಿನಾಂಕ : 12/11/2021 ರಂದು ಕಲಬುರಗಿ ಜಿಲ್ಲೆಯ ಶ್ರೀ.ಹಿಂಗುಲಾಂಬಿಕಾ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ನಡೆದ ಕಾರ್ಯಾಗಾರದ ವರದಿ**









ದಿನಾಂಕ :07.12.2021ರಂದು ಚಾಮರಾಜನಗರ ಜಿಲ್ಲೆಯ ಬೂದಿಪಡಗ ಸಭಾಭವನ, ಪುಣಜೂರು ವಲಯ, ಬಿ.ಆರ್.ಟಿ ಹುಲಿ ಸಂರಕ್ಷಣಾ ಪ್ರದೇಶದಲ್ಲಿ ನಡೆದ ಕಾರ್ಯಾಗಾರ














**ದಿನಾಂಕ:23.12.2021ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಶ್ರೀ.ಪವಾಡ ಬಸವಣ್ಣದೇವರ ಮಠದಲ್ಲಿ ನಡೆದರಾಜ್ಯ ಮಟ್ಟದ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯರ ಸಮ್ಮೇಳನ**









**ದಿನಾಂಕ:28.12.2021ರಂದು ಬೆಂಗಳೂರು ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗೆ ಆರ್.ಎಲ್‌ಜಾಲಪ್ಪ, ತಾಂತ್ರಿಕ ಮಹಾವಿದ್ಯಾಲಯ, ದೊಡ್ಡಬಳ್ಳಾಪುರದಲ್ಲಿ ನಡೆದ ಕಾರ್ಯಗಾರ**













**ದಿನಾಂಕ :25.02.2022ರಂದು ಶಿವಮೊಗ್ಗ ಜಿಲ್ಲೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಸಭಾಂಗಣ ಶ್ರೀಗಂಧದ ಕೋಟೆ ಆವರಣ, ಶಿವಮೊಗ್ಗದಲ್ಲಿ ನಡೆದ ಕಾರ್ಯಾಗಾರ**












